ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ । ರಾಯಚೂರು । ಬಳ್ಳಾರಿ । ವಿಜಯನಗರ । ಯಾದಗಿರಿ । ಬೆಂಗಳೂರು । ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ.

ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 140 | Tuesday 15-10-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-


## ಸಂಕ್ಷಿಪ್ತ ವಾರ್ತೆ

### ಮಾಜಿ ಸಚಿವ ಬಿ.ನಾಗೇಂದ್ರಗೆ ಜಾಮೀನು ಇಂದು ಬಿಡುಗಡೆ ಸಾಧ್ಯತೆ

● ವಾರ್ತಾಲೋಕ ವಾರ್ತೆ



**ಬಳ್ಳಾರಿ: ಅ14.** ಬಳ್ಳಾರಿ. ಶ್ರೀ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಂತಹ ಕೋಟ್ಯಾಂತರ ರೂಪಾಯಿ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ ನಾಗೇಂದ್ರ ಅವರಿಗೆ ಬೆಂಗಳೂರಿನ 82ನೇ ಸಿಟಿ ಸಿವಿಲ್ ಕೋರ್ಟ್ ಜಾಮೀನು ಮಂಜೂರು ಮಾಡಿದೆ ಮೂರು ತಿಂಗಳ ಜೈಲುವಾಸದ ಬಳಿಕ ಬಳಿಕ ಸಚಿವ ಬಿ ನಾಗೇಂದ್ರ ಅವರಿಗೆ ಕೋರ್ಟ್ ಜಾಮೀನು ನೀಡಿದೆ.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಕೋಟ್ಯಾಂತರ ರೂಪಾಯಿ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಅಧಿಕಾರಿಗಳು ಬಿ.ನಾಗೇಂದ್ರ ಅವರನ್ನು ಬಂಧಿಸಿದ್ದರು. ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಗರಣದಲ್ಲಿ ಮಾಜಿ ಸಚಿವ ಬಿ ನಾಗೇಂದ್ರ ಪ್ರಮುಖ ಆರೋಪಿಯಾಗಿದ್ದಾರೆ ಎಂದು ಇಡಿ ಅಧಿಕಾರಿಗಳು ಚಾರ್ಜ್ ಶೀಟ್ ನಲ್ಲಿ ಉಲ್ಲೇಖಿಸಿ ಕೋರ್ಟ್‌ಗೆ ವರದಿಯನ್ನು ಸಲ್ಲಿಸಿದರು.

ಬಳಿಕ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನಂತರ ಇಡಿ ಅಧಿಕಾರಿಗಳು ಇತ್ತೀಚಿಗೆ ಸಚಿವ ಬಿ ನಾಗೇಂದ್ರ ಸೇರಿದಂತೆ ಈ ಒಂದು ಪ್ರಕರಣದಲ್ಲಿ ಭಾಗಿಯಾದಂತಹ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಕೂಡ ಸಲ್ಲಿಸಿದ್ದರು. ಆದರೆ ಇಂದು ಬೆಂಗಳೂರಿನ 82ನೇ ಸಿಟಿ ಸಿವಿಲ್ ಕೋರ್ಟ್ ನ್ಯಾಯಾಲಯವು ಮಾಜಿ ಸಚಿವ ಬಿ ನಾಗೇಂದ್ರಗೆ ಜಾಮೀನು ಮಂಜೂರು ಮಾಡಿದೆ.

ಜಾಮೀನಿನ ಪ್ರತಿಯನ್ನು ಇಂದು ಪರಪ್ಪನ ಅಗ್ರಹಾರದ ಅಧಿಕಾರಿಗಳಿಗೆ ನೀಡಲಿದ್ದು ಇಂದು ಬಿಡುಗಡೆಯಾಗುವ ಸಾಧ್ಯತೆ ಇದೆ.

ಬಳ್ಳಾರಿ ಜಿಲ್ಲೆಯ ನಾಗೇಂದ್ರ ಅವರ ಅಭಿಮಾನಿಗಳು ಜಾಮೀನು ಮಂಜೂರಾದ ವಿಷಯ ತಿಳಿಯದು ಸಹಜವಾಗಿ ಹರ್ಷದಿಂದ ಸಂಭ್ರಮಿಸಿದರು.

### ಓಂ ಶ್ರೀ ಸಿಂಧು ಸೃಷ್ಟಿ ಸೇವಾ ಟ್ರಸ್ಟ್ ವತಿಯಿಂದ ಉಚಿತ ಹೊಲಿಗೆ ತರಬೇತಿ ಶಿಬಿರ ಉದ್ಘಾಟನೆ





● ವಾರ್ತಾಲೋಕ ವಾರ್ತೆ

**ಹೊಸಪೇಟೆ: ಅ14.** ನಗರದ ಓಂ ಶ್ರೀ ಸಿಂಧು ಸೃಷ್ಟಿ ಸೇವಾ ಟ್ರಸ್ಟ್ ವತಿಯಿಂದ ಹೊಸಪೇಟೆ ತಾಲೂಕಿನ ಹನುಮನಹಳ್ಳಿಯಲ್ಲಿ ಸೆಪ್ಟಂಬರ್ 10 ರಂದು ಉಚಿತ ಕರ ಕುಶಲತೆ ಮತ್ತು ಉಚಿತ ಹೋಲಿಕೆ ತರಬೇತಿ ಶಿಬಿರವನ್ನು ಏರ್ಪಡಿಸಲಾಯಿತು ಈ ಉದ್ಘಾಟನೆಯ ಕಾರ್ಯಕ್ರಮದಲ್ಲಿ

ಮಹಿಳೆಯರು ಉಚಿತ ಹೊಲಿಗೆ ತರಬೇತಿ ಪಡೆದು, ಆರ್ಥಿಕವಾಗಿ ಸಬಲರಾಗುವ ಮೂಲಕ ಸ್ವಾವಲಂಬಿ ಜೀವನ ನಡೆಸುವಂತಾಗಬೇಕು ಎಂದು ಪಿ.ಸಿ. ಶಾಂತ, ಹೇಳಿದರು. ಹನುಮನಹಳ್ಳಿಯ ಬಸಾಪುರ ವಾರ್ಡ್ ಗ್ರಾಮ ಪಂಚಾಯಿತಿ ಸದಸ್ಯರಾದ ನಾಗರಾಜ್ ಚೌಟ್ಗಿ ರವಿರಾಜ್ ಮಾಜಿ ಸದಸ್ಯರಾದ ಸುನಂದಮ್ಮ ಟ್ರಸ್ಟಿನ ಅಧ್ಯಕ್ಷರಾದ ಪಿ ಸಿ ಶಾಂತ ಸದಸ್ಯರಾದ ರಮೇಶ್, ಲೋಹಿತ್ ,ರುಕ್ಮಿಣಿ ,ರೇಣುಕಾ, ಯಮುನಾ,ಮತ್ತು ಹಾಗೂ ಹಿರಿಯ ಮುಖಂಡರಾದ ರಾಯನ ಗೌಡ್ರು ಮತ್ತು ಕಲಿಕಾ ಸದಸ್ಯರು ಎಲ್ಲರೂ ಉಪಸ್ಥಿತರಿದ್ದರು ಗ್ರಾಮ ಪಂಚಾಯಿತಿ ಸದಸ್ಯರಾದ ನಾಗರಾಜು ಮತ್ತು ರವಿರಾಜ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ತರಬೇತಿ ಪೂರ್ಣಗೊಳಿಸಿದವರಿಗೆ ಅವರ ಈ ಅವಧಿಯಲ್ಲಿ ಪಂಚಾಯಿತಿ ವತಿಯಿಂದ ಹೊಲಿಗೆ ಯಂತ್ರವನ್ನು ಕೊಡುವುದಾಗಿ ಭರವಸೆ ನೀಡಿದರು ನಂತರ ಓಂ ಶ್ರೀ ಸಿಂಧು ಸೃಷ್ಟಿ ಸೇವಾ ಟ್ರಸ್ಟ್ ವತಿಯಿಂದ ಅತಿಥಿಗಳಿಗೆ ಸನ್ಮಾನ ಮಾಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ವರದಿ ಅಂಬರೀಶ್ ನಾಯಕ್.**

### ಅ.17ರಂದು ತೀರ್ಥೋದ್ಭವ

**ಮಡಿಕೇರಿ, :** ರಾಜ್ಯದ ಜೀವನದಿ ಕಾವೇರಿಯ ಉಗಮಸ್ಥಾನ ಭಾಗಮಂಡಲದಲ್ಲಿ ಅ.17ರಂದು ಬೆಳಗ್ಗೆ 7.40ಕ್ಕೆ ಶುಭ ತುಲಾ ಲಗ್ನದಲ್ಲಿ ಕಾವೇರಿ ತೀರ್ಥೋದ್ಭವವಾಗಲಿದೆ ಎಂದು ದೇಗುಲ ಅರ್ಚಕರು ತಿಳಿಸಿದ್ದಾರೆ. ತೀರ್ಥ ಕುಂಡಿಕೆಯಲ್ಲಿ ಅ. 17 ರಂದು ಕಾವೇರಿ ನೀರು ತೀರ್ಥ ರೂಪದಲ್ಲಿ ಉಗಮವಾಗಲಿದೆ. ಪವಿತ್ರ ಕುಂಡಿಕೆಯಲ್ಲಿ ಕಾವೇರಿ ತೀರ್ಥರೂಪಿಣಿಯಾಗಿ ಉಕ್ಕಿ ಬರುತ್ತಾಳೆಂಬ ನಂಬಿಕೆ ಹಿಂದಿನ ಕಾಲದಿಂದಲೂ ನಡೆದುಬಂದಿದ್ದು . ಅದರಂತೆ ಪ್ರತಿವರ್ಷ ತೀರ್ಥೋದ್ಭವದ ಮುಹೂರ್ತ ನಗದಿಯಾಗಿದೆ.

ಸಾವಿರಾರು ಭಕ್ತರು

ಇಲ್ಲಿಗೆ ಆಗಮಿಸುವುದರಿಂದ ಜಿಲ್ಲಾಡಳಿತ ಈಗಾಗಲೇ ಸಿದ್ಧತೆ ಆರಂಭಿಸಿದೆ. ಪೊಲೀಸರು ಕೂಡ ಬಿಗಿ ಭದ್ರತೆ ಕಲ್ಪಿಸಲಿದ್ದು ರಾಜ್ಯದ ನಾನಾ ಮೂಲೆಗಳಿಂದ ಭಕ್ತರು ಆಗಿಸುತ್ತಿದ್ದು ಮಡಿಕೇ-ರಿಯಲ್ಲಿ ಹಬ್ಬದ ವಾತಾವರಣ ಮೂಡಿದೆ.

---

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸಂಡೂರಿನಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ವಿವಿಧ ಯೋಜನೆಗಳಿಗೆ ಉದ್ಘಾಟನೆ**

# ಕಾಮಗಾರಿಗಳಿಗೆ ಅನುದಾನದ ಕೊರತೆಯಿಲ್ಲ ಸಿದ್ದರಾಮಯ್ಯ

● ವಾರ್ತಾಲೋಕ ವಾರ್ತೆ





**ಬಳ್ಳಾರಿ, :** ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಾಗುತ್ತಿದ್ದು, ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಯಾವುದೇ ರೀತಿಯ ಅನುದಾನದ ಕೊರತೆಯಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದರು.

ಅವರು ಇಂದು ಜಿಲ್ಲೆಯ ಸಂಡೂರಿನ ಅಗ್ನಿಶಾಮಕದಳದ ಸಮೀಪದಲ್ಲಿರುವ ವಿಶ್ವಾಸ್ ಲಾಡ್ ಮೈದಾನದ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಂಡೂರು ತಾಲ್ಲೂಕಿನ ಸಾಧನಾ ಸಮಾವೇಶ, ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ವಿವಿಧ ಯೋಜನೆಗಳಿಗೆ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿ, ಸಂಡೂರು ಭಾಗದಲ್ಲಿ 280 ಕೋಟಿ ರೂ. ವೆಚ್ಚದಲ್ಲಿ ವಿವಿಧ ಯೋಜನೆಗಳ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. 2004 ರಿಂದ 2024 ರವರೆಗೆ 1,216 ಕೋಟಿ ರೂ. ಅನುದಾನ ನೀಡಲಾಗಿದೆ. ರೂ.160.00 ಕೋಟಿ ವೆಚ್ಚದಲ್ಲಿ ನಿಡುಗುರ್ತಿ ಸೇರಿದಂತೆ 58 ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

2013 ರ ನಮ್ಮ ಸರಕಾರದ ಅವಧಿಯಲ್ಲಿ ರಾಜ್ಯದಲ್ಲಿ ಸುಮಾರು 15 ಲಕ್ಷ ಮನೆಗಳನ್ನು ಕಟ್ಟಲು ಗುರಿ ಹೊಂದಲಾಗಿತ್ತು. ಸಂಡೂರು

ಹೋಬಳಿಯ ಚೋರನೂರು ಗ್ರಾಮದಲ್ಲಿ ರೂ.2.58 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಪೊಲೀಸ್ ಠಾಣೆ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು. ಸಂಡೂರು ಪಟ್ಟಣದಲ್ಲಿ 01 ಸೆಪ್ಟೆಂಬರ್ 2024 ರಿಂದ ಸ್ವತಂತ್ರವಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ) ಯಾಗಿ ಘೋಷಿಸಲಾಗಿದೆ. ತೋರಣಗಲ್ಲು ಗ್ರಾಮದಲ್ಲಿ ರೂ.2 ಕೋಟಿ ವೆಚ್ಚದೊಂದಿಗೆ ಸ್ವತಂತ್ರ ಪದವಿ ಪೂರ್ವ ಕಾಲೇಜ್ ಮಂಜೂರು ಮಾಡಲಾಗಿದೆ.

ಸಂಡೂರು ಪಟ್ಟಣದಲ್ಲಿ 200 ಹಾಸಿಗೆಗಳ ಮಲ್ಟಿಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ರೂ.180 ಕೋಟಿ ವೆಚ್ಚದಲ್ಲಿ ನಿರ್ಮಾಣ, ಸಂಡೂರು ಪಟ್ಟಣ ಮತ್ತು ಡಿ.ಅಂತಾಪುರ ಗ್ರಾಮದಲ್ಲಿ ರೂ.56 ಕೋಟಿ ವೆಚ್ಚದಲ್ಲಿ ವಿದ್ಯುತ್ ಉಪಕೇಂದ್ರಗಳ ನಿರ್ಮಾಣ.

ಭಾಗದಲ್ಲಿಯೇ 12,000 ಮನೆಗಳನ್ನು ನೀಡಲಾಗಿತ್ತು. ಸಂಡೂರು ತಾಲ್ಲೂಕಿನ ಸಮಗ್ರ ಅಭಿವೃದ್ಧಿಗಾಗಿ ನಮ್ಮ ಸರ್ಕಾರವು 1216.38 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡುವುದರ ಮೂಲಕ ಸರ್ವರ ಏಳಿಗೆಗಾಗಿ ಶ್ರಮಿಸುವ ಸರ್ಕಾರ ನಮ್ಮದು

ಜನಸಂಖ್ಯೆಗೆ ಅನುಗುಣವಾಗಿ ಪ.ಜಾತಿ ಮತ್ತು ಪ.ವರ್ಗದವರ ಅಭಿವೃದ್ಧಿಗಾಗಿ ಹಣ ಮೀಸಲಿಟ್ಟು, ಖರ್ಚು ಮಾಡುತ್ತಿದ್ದೇವೆ, ದೇಶದಲ್ಲಿಯೇ ಎಸ್‌ಸಿ, ಎಸ್‌ಟಿ ಕಾಯ್ದೆಯನ್ನು ಜಾರಿಗೊಳಿಸಿದ ರಾಜ್ಯ ನಮ್ಮದಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರ ಅಭಿವೃದ್ಧಿಗಾಗಿಯೇ 33,182 ಕೋಟಿ

ಸಂಡೂರು ಪಟ್ಟಣದ ಮಧ್ಯ ಭಾಗದಲ್ಲಿ ಸುಸಜ್ಜಿತವಾದ ಬಸ್ ನಿಲ್ದಾಣವನ್ನು ರೂ.30 ಕೋಟಿ ವೆಚ್ಚದಲ್ಲಿ ನಿರ್ಮಾಣ ಸೇರಿದಂತೆ ಹಲವು ಕಾಮಗಾರಿಗಳಿಗೆ ಅನುಮೋದನೆಯಾಗಿದ್ದು, ಎಲ್ಲವೂ ಟೆಂಡರ್ ಹಂತದಲ್ಲಿವೆ ಎಂದು ಅವರು ವಿವರಿಸಿದರು.

ವಸತಿ, ವಕ್ಫ್, ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಮಾತನಾಡಿ, ರಾಜೀವ್ ಗಾಂಧಿ ವಸತಿ ನಿಗಮದಿಂದ ಬಳ್ಳಾರಿ ಮತ್ತು ಸಂಡೂರಿನಲ್ಲಿ 135 ಕೋಟಿ ವೆಚ್ಚದಲ್ಲಿ ಕಳೆದ ಬಾರಿ 2173 ಮನೆಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿತ್ತು. ಹಲವು ಅಡೆ ತಡೆಗಳಿಂದ ಮನೆಗಳ ನಿರ್ಮಾಣ ಕಾರ್ಯ ವಿಳಂಬವಾಗಿತ್ತು. ಸದ್ಯಕ್ಕೆ ನಿರ್ಮಾಣ ಕಾರ್ಯದಲ್ಲಿ ಪೂರ್ಣಗೊಂಡಿರುವ

ರೂ. ಮೀಸಲಿರಿಸಲಾಗಿದೆ ಎಂದರು.

ಗ್ಯಾರೆಂಟಿ ಯೋಜನೆಗಳಿಂದ ರಾಜ್ಯದ ಜನರ ಜೀವನ ಅಭಿವೃದ್ಧಿ:

ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ನಮ್ಮ ಸರ್ಕಾರ ರಚನೆಯಾದ 8 ತಿಂಗಳಲ್ಲಿಯೇ ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ. ಪಂಚ ಗ್ಯಾರೆಂಟಿಗಳಿಂದ ರಾಜ್ಯದ ಜನಜೀವನ ಅಭಿವೃದ್ಧಿ ಕಾಣುತ್ತಿದೆ ಇದು ಹೆಮ್ಮೆ ಪಡುವಂತ ವಿಷಯ ಎಂದರು ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ತೆರಿಗೆ ಹಣದ ಪಾಲಿನಲ್ಲಿ ನಮಗೆ ಅನ್ಯಾಯವಾಗುತ್ತಿದ್ದು, ಇದಕ್ಕಾಗಿಯೇ ನಮ್ಮ ತೆರಿಗೆ ನಮ್ಮ ಹಕ್ಕು ಎಂಬುದಾಗಿ ಹೋರಾಟ ಮಾಡುತ್ತಿದ್ದೇವೆ. ದೇಶದಲ್ಲಿಯೇ ಅತಿ ಹೆಚ್ಚು ತೆರಿಗೆ ಹಣ ಕಟ್ಟುವುದರಲ್ಲಿ ನಮ್ಮ ರಾಜ್ಯ ಎರಡನೆ ರಾಜ್ಯವಾಗಿದೆ, ಆದರೆ ನಮಗೆ ಸಿಗಬೇಕಾದ ಪಾಲು ಸಮರ್ಪಕವಾಗಿ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

500 ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ. ಉಳಿದ ಮನೆಗಳ ನಿರ್ಮಾಣ ಕಾರ್ಯ ಕೂಡ ನಡೆಯುತ್ತಿದ್ದು, ತ್ವರಿತವಾಗಿ ಪೂರ್ಣಗೊಳಿಸಿ ಹಸ್ತಾಂತರಿಸಲಾಗುವುದು ಎಂದು ಹೇಳಿದರು. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಮಾತನಾಡಿ, ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ರಚನೆಯಾದ ಬಳಿಕ ಸಾಕಷ್ಟು ಜನಪರ ಕಾರ್ಯ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ, ಅವುಗಳನ್ನು ಅನುಷ್ಠಾನವೂ ಮಾಡಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಅಸಂಘಟಿತ ವಲಯಗಳಡಿ ನೋಂದಾಯಿಸಿಕೊಂಡ ಕಾರ್ಮಿಕರಿಗೆ ಸ್ಮಾರ್ಟ್ ಲಾರ್ಡ್ ವಿತರಣೆ ಮಾಡಲಾಯಿತು. ಗೃಹಲಕ್ಷ್ಮಿ ?ಮ ಯೋಜನೆಯಡಿ ಸೌಲಭ್ಯ ಪಡೆದಿರುವ ಮಹಿಳಾ

ಈ ಹಿಂದೆ 2013–18 ರಲ್ಲಿ ನಮ್ಮ ಸರ್ಕಾರದಿಂದ 15 ಲಕ್ಷ ಮನೆಗಳನ್ನು ಕಟ್ಟಿದ್ದೆವು, ಸಂಡೂರಿನಲ್ಲಿಯೇ ಸುಮಾರು 12 ಸಾವಿರ ಮನೆಗಳನ್ನು ಕಟ್ಟಿದ್ದೇವೆ, ಇದಕ್ಕೆ ಕಾರ್ಮಿಕ ಸಚಿವರಾದ ಸಂತೋಷ್ ಲಾಡ್ ಹಾಗೂ ಆಗ ಸಂಡೂರಿನ ಶಾಸಕರಾಗಿದ್ದ, ಈಗಿನ ಸಂಸದ ಈ. ತುಕಾರಾಂ ಅವರೇ ಕಾರಣ, ಇದರ ಕೀರ್ತಿ ಇವರಿಗೆ ಸಲ್ಲಬೇಕು, ಆದರೆ ಕಳೆದ ಬಾರಿ ಇದ್ದ ಸರ್ಕಾರ ವಸತಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿ ಮಾಡಿಲ್ಲ ಎಂದು ಆರೋಪಿಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಂದಾದ ಸಂಡೂರು ತಾಲ್ಲೂಕು 371 ಜೆ ಸೌಲಭ್ಯವೂ ಒಳಗೊಂಡಿದೆ. ಈ ಅನುಷ್ಠಾನದ ಸದುಪಯೋಗವಾಗಬೇಕು.

ಈ ಭಾಗದ ಅಭಿವೃದ್ಧಿಗೆ ನಮ್ಮ ಸರ್ಕಾರವು ರೂ.1216 ಕೋಟಿ ನೀಡಿದೆ, ನನ್ನ ಕ್ಷೇತ್ರವಾದ ಕನಕಪುರಕ್ಕಿಂತಲೂ

ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣೆ ಮಾಡಲಾಯಿತು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸ್ವಾಗತಿಸಿದರು. ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ವಂದಿಸಿದರು. ಕಾರ್ಯಕ್ರಮಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರೂ ಆದ ಡಿ.ಕೆ.ಶಿವಕುಮಾರ ಅವರು ನಾರಿಹಳ್ಳ ಜಲಾಶಯಕ್ಕೆ ಬಾಗಿನ ಅರ್ಪಿಸಿದರು. ಈ ವೇಳೆ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್.ಗಣೇಶ್, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಶಾಸಕರುಗಳಾದ ಬಿ.ಎಂ.ನಾಗರಾಜ, ನಾರಾ ಭರತ್ ರೆಡ್ಡಿ, ಡಾ.ಶ್ರೀನಿವಾಸ, ಲತಾ ಮಲ್ಲಿಕಾರ್ಜುನ, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ, ಡಾ.ಬಾಬು ಜಗನ್ ಜೀವನ ರಾಮ್

ಹೆಚ್ಚಿನ ಅನುದಾನವನ್ನು ಈ. ತುಕಾರಾಂ ಅವರು ಪಡೆದಿದ್ದು, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಶ್ರಮ ಪಟ್ಟಿದ್ದಾರೆ ಎಂದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಮಾತನಾಡಿ, ಸಂಡೂರು ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಅನುದಾನವನ್ನು ವಿವಿಧ ಯೋಜನೆಗಳಡಿ ನೀಡಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚು ಅನುದಾನ ಪಡೆದಿರುವ ಕ್ಷೇತ್ರ ಇದಾಗಿದೆ ಎಂದು ಅವರು ಹೇಳಿದರು.

ಸಂಸದ ಈ.ತುಕಾರಾಂ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಂಡೂರು ಭಾಗದಲ್ಲಿ ಸುಮಾರು 1216 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಸಂಡೂರು ಪಟ್ಟಣಕ್ಕೆ ಅಮೃತ 2.0 ಯೋಜನೆ ಅಡಿ ನಾರಿಹಳ್ಳ ಜಲಾಶಯದಿಂದ ಸುಧಾರಿತ ನೀರು ಸರಬರಾಜು ಯೋಜನೆ ಕೈಗೆತ್ತಿಕೊಳ್ಳುವ ಕಾಮಗಾರಿ ರೂ. 54.45 ಕೋಟಿ ವೆಚ್ಚದಲ್ಲಿ ಪ್ರಾರಂಬಿಸಲಾಗಿದೆ. ರೂ.2.50 ಕೋಟಿ ವೆಚ್ಚದಲ್ಲಿ ಕನಕಭವನ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವೀರಶೈವ ಲಿಂಗಾಯತ, ವಿಶ್ವಕರ್ಮ, ಕುರುಬ, ಮೇದಾರ, ಯಾದವ, ಗೊಲ್ಲರು, ಮಡಿವಾಳ ಮತ್ತು ಮುಂತಾದ 13 ಸಮುದಾಯಗಳಿಗೆ ರೂ. 07.50 ಕೋಟಿ ವೆಚ್ಚದಲ್ಲಿ ಸಮುದಾಯ ಭವನಗಳ ನಿರ್ಮಾಣ, ಚೋರನೂರು

ಚರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ಮೆಹರೋಜ್ ಖಾನ್, ಪುರಸಭೆ ಅಧ್ಯಕ್ಷ ಸಿರಾಜ್ ಹುಸೇನ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ತ್ರಿಲೋಕಚಂದ್ರ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಬಳ್ಳಾರಿ ವಲಯ ಐಜಿಪಿ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ., ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಉಪವಿಭಾಗಾಧಿಕಾರಿ ಪ್ರಮೋದ್ ಸೇರಿದಂತೆ ಚುನಾಯಿತ ಪ್ರತಿನಿಧಿಗಳು, ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

---

# ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಬೆಂಚ್ ಪ್ರೆಸ್ ಜಿಲ್ಲೆಯಿಂದ 6 ಜನ ಕ್ರೀಡಾಪಟುಗಳು ಆಯ್ಕೆ

● ವಾರ್ತಾಲೋಕ ವಾರ್ತೆ



**ಹೊಸಪೇಟೆ : ಅ.14:** ಅಕ್ಟೊಬರ್ 14 ರಿಂದ 18 ನಾಲ್ಕು ದಿನಗಳ ಕಾಲ ಗೋವಾದ ರವೀಂದ್ರ ಭವನ್ ಬೈನಾ ವಾಸ್ಕೋ ನಲ್ಲಿ, ಇಂಡಿಯನ್ ಪವರ್ ಲಿಫ್ಟಿಂಗ್ ಅಸ್ಸೊಸಿಯೇಷನ್ ವತಿಯಿಂದ ರಾಷ್ಟ್ರ ಮಟ್ಟದ ಬೆಂಚ್ ಪ್ರೆಸ್ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಈ ಸ್ಪರ್ಧೆಯಲ್ಲಿ ನಮ್ಮ ವಿಜಯನಗರ

ಜಿಲ್ಲೆಯ ವಿಕ್ಟರಿ ಜಿಮ್ ನ 6 ಜನ ಕ್ರೀಡಾಪಟುಗಳು ಕರ್ನಾಟಕದ ಪ್ರತಿನಿಧಿಗಳಾಗಿ ಸ್ಪರ್ಧಿಸಲಿದ್ದಾರೆ.

ಇತ್ತೀಚೆಗೆ ಉಡುಪಿಯ ಸಲಿಗ್ರಮದಲ್ಲಿ ನಡೆದಂತಹ ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಬೆಂಚ್ ಪ್ರೆಸ್ ಸ್ಪರ್ಧೆಯಲ್ಲಿ ವಿಜಯನಗರದಿಂದ 15 ಜನ ಕ್ರೀಡಾಪಟುಗಳು ಭಾಗವಹಿಸಿ 11 ಜನ ಪದಕ ವಿಜೇತರಿರಾಗಿದ್ದರು. ಇದರಲ್ಲಿ 6 ಜನ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆ ಯಾಗಿರುತ್ತಾರೆ ತರಬೇತುದಾರರಾದ ವಲಿಬಾಷ ಮತ್ತು ವಿಜಯವಾಣಿ. ಹುಸೇನ್ ಭಾಷ.

ಹಸೆನ್ ಕೆ. ಎಸ್, ದೀಪಕ್ ಕೆ .ಎಸ್.ಅಬ್ದುಲ್ಲಾ ರಾಷ್ಟ್ರಮಟ್ಟದಲ್ಲಿ ಪ್ರದರ್ಶನವನ್ನು ನೀಡುವುದರ ಮೂಲಕ ಕರ್ನಾಟಕಕ್ಕೆ ಹಾಗು ವಿಜಯನಗರ ಜಿಲ್ಲೆಗೆ ಕೀರ್ತಿ ಪತಾಕಿ ಹಾರಿಸಲಿ ಹಾಗು 2025 ರಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಮಟ್ಟದ ಪವರ್ ಲಿಫ್ಟಿಂಗ್ ಬೆಂಚ್ ಪ್ರೆಸ್ ಸ್ಪರ್ಧೆಯಲ್ಲಿಯೂ ಸಹ ಭಾಗವಹಿಸಿ ನಮ್ಮ ದೇಶಕ್ಕೆ ಕೀರ್ತಿ ತರಲಿ ಎಂದು ಟೀಮ್ ಎಸ್.ಆರ್.ಕೆ.ಕರ್ನಾಟಕ ಹಾಗು ಟೀಮ್ ಎಸ್. ಆರ್. ಕೆ.ಹೊಸಪೇಟೆ ಹಾಗು ಕರ್ನಾಟಕ ಪತ್ರಕರ್ತರ ಸಂಘದ ಅಧ್ಯಕ್ಷರಾದಂತಹ ಬಿ.ಹೆಚ್.ಎಸ್. ರಾಜು ಅವರು ಹಾಗೂ ಸಂಘದ ಎಲ್ಲಾ ಪದಾಧಿಕಾರಿಗಳು ಮತ್ತು ನಗರದ ಕ್ರೀಡಾ ಅಭಿಮಾನಿಗಳು ಕ್ರೀಡಾ ಪ್ರೋತ್ಸಾಹಕರು ಶುಭ ಹಾರೈಸಿದರು.

**ವರದಿ,ಲಕ್ಕಿಮರದ ಮಂಜುನಾಥ**

### ಮದ್ಯಪಾನ ಮಾಡಿ ವಾಹನ ಚಾಲನೆ 61 ಪ್ರಕರಣ ದಾಖಲು, ಲೈಸೆನ್ಸ್ ಜಪ್ತಿ



**ಬೆಂಗಳೂರು, :** ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವ ಚಾಲಕ ಹಾಗೂ ಸವಾರರ ವಿರುದ್ಧ ಪೂರ್ವ ವಿಭಾಗದ ಸಂಚಾರಿ ಪೊಲೀಸರು ವಿಶೇಷ ಕಾರ್ಯಚರಣೆ ನಡೆಸಿ 61 ಪ್ರಕರಣಗಳನ್ನು ದಾಖಲು ಮಾಡಿದ್ದಾರೆ. ಅ.10ರಿಂದ 13ರವರೆಗೆ ಈ ವಿಭಾಗದ ಠಾಣಾ ಸರಹದ್ದುಗಳಲ್ಲಿ ಸಂಚಾರಿ ಪೊಲೀಸರು ವಿಶೇಷ ಕಾರ್ಯಾಚರಣೆ ಕೈಗೊಂಡು 4,789 ವಾಹನಗಳನ್ನು ತಪಾಸಣೆ ಮಾಡಿ 61 ಪ್ರಕರಣಗಳನ್ನು ದಾಖಲಿಸಿಕೊಂಡು, ಚಾಲನಾ ಪರವಾನಗಿ ಪತ್ರಗಳನ್ನು ಜಪ್ತಿ ಪಡಿಸಿಕೊಂಡು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಚೇರಿಗೆ ಅಮಾನತುಪಡಿಸಲು ಕಳುಹಿಸಿಕೊಡಲಾಗಿದೆ.

ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಹಾಗ ಸಂಚಾರ ನಿಯಮಗಳ ಮಹತ್ವದ ಬಗ್ಗೆ ಅರಿವು ಮೂಡಿಸಲಾಯಿತು. ಮುಂದಿನ ದಿನಗಳಲ್ಲಿಯೂ ಸಹ ವಿಶೇಷ ಕಾರ್ಯಾಚರಣೆ ಮುಂದುವರೆಸಲಾಗುವುದು ಎಂದು ಸಂಚಾರಿ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಕ್ಟೋಬರ್ 28 ಕ್ಕೆ ನೌಕರ ಸಂಘದ ಚುನಾವಣೆ



● ವಾರ್ತಾಲೋಕ ವಾರ್ತೆ

**ಯಲಬುರ್ಗಾ: ಅ14.** ಇದೇ ತಿಂಗಳ 28 ರಂದು ಕರ್ನಾಟಕ ರಾಜ್ಯ ನೌಕರರ ಸಂಘದ ಯಲಬುರ್ಗಾ ತಾಲೂಕ ಘಟಕದ ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಪಟ್ಟಣದ ನೌಕರ ಭವನದಲ್ಲಿ ಅಕ್ಟೋಬರ್ 09 ರಿಂದ ಉಮೇದುವಾರಿಕೆ ಪ್ರಾರಂಭವಾಗಿದೆ. ಅಕ್ಟೋಬರ್ 18ನೇ ತಾರೀಖು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಮರುದಿನ ಸಲ್ಲಿಕೆಯಾದ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಲೋಕೋಪ ಯೋಗಿ ಇಲಾಖೆ ರಾಷ್ಟ್ರೀಯ ಹೆದ್ದಾರಿ ಇಲಾಖೆಯಿಂದ ನಿರ್ದೇಶಕರ ಸ್ಥಾನಕ್ಕೆ ಶಿವಪುತ್ರಪ್ಪ ತಿಪ್ಪನಾಳ್ ಅವರು ಉಮೇದುವಾರಿಕೆಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಚುನಾವಣೆ ಅಧಿಕಾರಿಯಾಗಿ ನಿವೃತ್ತ ಗ್ರೇಡ –2 ತಹಶೀಲ್ದಾರ್ ನಾಗಪ್ಪ ಸಜ್ಜನ್, ಇಲಾಖೆಯ ಸಹಾಯಕ ಅಭಿಯಂತರ ಮಾಂತೇಶ ಮಠದ, ರಮೇಶ್ ನಾಯಕ್, ಸಾವಿತ್ರಿ ಛಲವಾದಿ, ಹಾಗೂ ತಾಲೂಕು ನೌಕರ ಸಂಘದ ಅಧ್ಯಕ್ಷ ವೈ ಜಿ ಪಾಟೀಲ್, ಇತರ ಇಲಾಖೆ ಅಧಿಕಾರಿಗಳಾದ ಬಸವರಾಜ್ ಉಮ್ಲೂಟಿ, ಪ್ರಶಾಂತ್ ಗೌಡ, ಆನಂದ್ ತುಪ್ಪದ, ಶಿವರಾಜ್ ದಾನಕ್ಕೈ ಗ್ರೇಡ್ ಟು ಅಧಿಕಾರಿಗಳು ಮತ್ತು ಸದಸ್ಯರುಗಳು ಹಾಗೂ ಇತರ ಇನ್ನೂ ಕೆಲವು ವಿವಿಧ ಸಿಬ್ಬಂದಿಗಳು ಹಾಜರಿದ್ದರು.

**ವರದಿ.ಮಂಗಳೇಶ ಎಸ್ ಮಂಗಳೂರು**

# ಶ್ರೀ ಗುರು ಕೊಟ್ಟೂರೇಶ್ವರ ಪವಾಡಕ್ಕೆ ಸಾಕ್ಷಿ

## ದಸರಾ ಹಬ್ಬ ದಿನದಂದು ಕೋಡಿ ಬಿದ್ದ ಕೊಟ್ಟೂರು ಕೆರೆ: ಜನರಲ್ಲಿ ಸಂಭ್ರಮ



● ವಾರ್ತಾಲೋಕ ವಾರ್ತೆ

**ಕೊಟ್ಟೂರು :ಅ14.** ಕೊಟ್ಟೂರು ಕೆರೆ ದಸರಾ ಹಬ್ಬ ದಿನವಾದ ಶನಿವಾರ ಕೋಡಿ ಬಿದ್ದು ಹರಿಯುತ್ತಿದೆ. ಈ ವಿಚಾರ ಜನರಲ್ಲಿ ಸಂಭ್ರಮ ಉಕ್ಕಿಸಿದ್ದು, ತುಂಬಿ ಹರಿಯುವ ಕೆರೆಯ ಸೊಬಗು ಕಣ್ಣಿನ ತುಂಬಿಕೊಳ್ಳಲು ಪಟ್ಟಣ ಸೇರಿದಂತೆ ಸುತ್ತಮುತ್ತಲ ಹಳ್ಳಿಗಳ ಜನರು ತಂಡೋಪತಂಡವಾಗಿ ಕೆರೆಯತ್ತ ಧಾವಿಸುತ್ತಿದ್ದಾರೆ.

ತಾಲೂಕಿನಾದ್ಯಂತ ಶುಕ್ರವಾರ ರಾತ್ರಿ ಉತ್ತಮವಾಗಿ ಸುರಿದ ಮಳೆಗೆ, ಕೊಟ್ಟೂರು ಶನಿವಾರ ಮಧ್ಯಾಹ್ನ ತುಂಬಿ ಹರಿದಿದೆ,ಕೆರೆಯ ಕೋಡಿ ಬಿದ್ದ ವಿಷಯ ತಿಳಿದ ಪಟ್ಟಣದ ಜನರು ತಂಡೋಪ ತಂಡಾಗಿ ಆಗಮಿಸಿ, ತುಂಬಿ ಹರಿಯುವ ಕೆರೆಯನ್ನು ವೀಕ್ಷಿಸಿ ಹರ್ಷ ವ್ಯಕ್ತಪಡಿಸಿದರು.

ಕೆರೆ 2022 ಇದೇ ಅಕ್ಟೋಬರ್ ತಿಂಗಳಲ್ಲಿ 10 ವರ್ಷಗಳ ನಂತರ ಕೆರೆ ತುಂಬಿತ್ತು. ಮತ್ತೆ 2 ವರ್ಷದ ನಂತರ ಶನಿವಾರ ವಿಜಯ ದಶಮಿ ದಿನದಂದು ಕೆರೆ ಕೋಡಿ ಬಿದ್ದಿರುವುದು ಕೊಟ್ಟೂರು ತಾಲೂಕಿನ ಜನರಲ್ಲಿ ಸಂಭ್ರಮ ಮನೆ ಮಾಡಿದೆ.ಇದು ಶ್ರೀ ಗುರು ಕೊಟ್ಟೂರೇಶ್ವರ ಪವಾಡಕ್ಕೆ ಸಾಕ್ಷಿ ಆಯಿತು. ಕೊಟ್ಟೂರು ಕೆರೆ ಸುಮಾರು 930 ಎಕ್ಕರಿಗೂ ಹೆಚ್ಚು ವಿಸ್ತೀರ್ಣ ಹೊಂದಿದ್ದು 850 ಎಕ್ಕರೆ ನೀರನ್ನು ಸಂಗ್ರಹಣ ಸಾಮರ್ಥ್ಯ ಹೊಂದಿದ ಬೃಹತ್ ಕೆರೆ.1889 ರಲ್ಲಿ ಇದರ ನಿರ್ಮಾಣ.ಅಂದಿನಿಂದ ಕೆರೆ ಕೆಳ ಬಾಗದ ಕೊಟ್ಟೂರಿನ ಚಿರಿಬಿ ರಸ್ತೆ, ಕೂಡ್ಲಿಗಿ ರಸ್ತೆ ಹಾಗೂ ಹಗರಿಬೊಮ್ಮನಹಳ್ಳಿ ರಸ್ತೆಯ ಮಾರ್ಗದಲ್ಲಿ ಎತ್ತ ನೋಡಿದರತ್ತ ಭತ್ತದ ಗದ್ದೆಗಳು ನೋಡುಗರ ಕಣ್ಣಿಗೆ ಸಂಭ್ರಮ ಉಂಟು ಮಾಡುತ್ತಿದ್ದವು.ಸಣ್ಣನೀರಾವರಿ ಇಲಾಖೆ ಅಧಿಕಾರಿ ಕೆರೆ ಸುತ್ತ ಮುತ್ತಲಿನ ಪರಿಸರವನ್ನು ಅಭಿವೃದ್ಧಿ ಪಡಿಸಲು ಸ್ಥಳೀಯ ಸಂಘ, ಸಂಸ್ಥೆಗಳು ಆಗ್ರಹಿಸಿದರು.



ಕೊಟ್ -1

1993ರಲ್ಲಿ ಕೆರೆ ಭಾಗಶಃ ತುಂಬಿದ್ದರೂ ಪೂರ್ಣವಾಗಿರಲಿಲ್ಲ. ಕೊಟ್ಟೂರು ಕೆರೆ 1889 ರಲ್ಲಿ ನಿರ್ಮಾಣವಾಗಿದ್ದು ಕೋಡಿ ಬಾಯಿ ಕಟ್ಟೆಯಲ್ಲಿ ರಂದ್ರವಾಗಿ ನೀರು ಪೋಲಾಗುತ್ತಿದೆ ಮತ್ತು ಕೆರೆ ನೀರು ಹೆಚ್ಚಾಗಿ ರಂಧ್ರಗಳು ವಿಸ್ತಾರವಾದರೆ ಅನಾಹುತ ಸಂಭವಿಸಬಹುದು. ಎಂದು ಪ್ರವೀಣ್ ಕುಮಾರ್ ಹೇಳಿದರು

ಕೊಟ್ -2

ಕೆರೆ ತುಂಬದ ಕಾರಣ ಗದ್ದೆಗಳಲ್ಲಿ ಭತ್ತ ಇಲ್ಲದಂತಾಗಿ. ಅಂದಿಗು ಇಂದಿಗೂ ಇಲ್ಲಿನ ಗದ್ದೆಗಳಲ್ಲಿ ಭತ್ತದ ಫಸಲು ಮರೀಚಿಕೆ ಆಗಿದೆ.33 ವರ್ಷಗಳಲ್ಲಿ ಕೆರೆ ಮಾತ್ರ 3-4 ಬಾರಿ ತುಂಬಿದೆ. ಅಂತರ್ಜಲನಿರ್ವಹಣೆಗಾಗಿಕೆರೆಯ ನೀರು ರೈತರಿಗೆ ಭತ್ತ ಬೆಳೆಯಲು ಪೂರೈಕೆ ಆಗದಂತಾಯಿತು ಎಂದು ಭತ್ತ ಬೆಳೆಗಾರ ರೈತರು ಪತ್ರಿಕೆಗೆ ಮಾಹಿತಿ ನೀಡಿದರು.

ವಿರುಪಾಕ್ಷಪ್ಪ ಕೊಟ್ಟೂರು

ಕೊಟ್ -3

ಕೊಟ್ಟೂರು ಕೆರೆಯ ಕೋಡಿಯಲ್ಲಿ ಬಿರುಕು ಶುಕ್ರವಾರ ರಾತ್ರಿ ಸಮೃದ್ಧ ಮಳೆಯಾಗಿ ಕೊಟ್ಟೂರು ಕೆರೆಗೆ ನೀರು ಬಂದಿರಬಹುದು ಎಂದು ಬೆಳಗ್ಗೆ ಎದ್ದ ಕೂಡಲೇ ಕೆರೆಗೆ ಭೇಟಿ ನೀಡಿದೆ, ಕೆರೆ ಎಂದರೆ ಪಂಚಪ್ರಾಣ, ಏಕೆಂದರೆ ಇರುವುದೊಂದೇ ನೀರಿನ ತಾಣ, ಕೆರೆ ಕೋಡಿ ಬೀಳಲು ಇನ್ನೂ ಅರ್ಧ ಅಡಿ ನೀರು ಬರುವುದು ಬಾಕಿ ಇದೆ, ಇದೇ ರೀತಿ ಇನ್ನೆರಡು ಮಳೆಗಳು ಬಂದರೆ ಕೋಡಿ ಬೀಳಬಹುದು, ಈಗಾಗಲೇ ಕೊಡಿಯ ಗೋಡೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಹತ್ತಿದೆ, ಕೊಡಿ ತನ್ನ ಉದ್ದಕ್ಕೂ ಎಂಟು ಹತ್ತಿರ ಬಿರುಕು ಬಿಟ್ಟು ಇದರಿಂದ ನೀರು ಹೊರಗಡೆ ಹರಿಯುತ್ತಿದೆ, ಅದರಲ್ಲೂ ಕೋಡಿಯ ಪ್ರಮುಖ ಭಾಗದಲ್ಲಿ ನೀರು ಹೋಗುತ್ತದೆ, ಮತ್ತು ಇದನ್ನು ಹೀಗೆ ಬಿಟ್ಟರೆ ಕೊಡಿಯೇ ಒಡೆದು ಹೋಗಿ ನೀರೆಲ್ಲ ಪೋಲಾಗುವುದು ಗ್ಯಾರಂಟಿ, ಇದನ್ನು ಈಗಾಗಲೇ ಸಣ್ಣ ನೀರಾವರಿ ಇಲಾಖೆಗೆ ತಿಳಿಸಿದ್ದೇನೆ, ಸಂಬಂಧಪಟ್ಟವರು ಬೇಗನೆ ಎಚ್ಚೆತ್ತುಕೊಂಡು ಇದನ್ನು ರಿಪೇರಿ ಮಾಡಿಸಬೇಕು, ಇಲ್ಲದಿದ್ದರೆ ಮುಂದೆ ಆಗುವ ದೊಡ್ಡ ಅನಾಹುತಕ್ಕೆ ಅವರೇ ಹೊಣೆಗಾರರಾಗುತ್ತಾರೆ,

ಅಂಚೆ ಕೊಟ್ರೇಶ್

ನಮ್ಮ ಕೆರೆ ನಮ್ಮ ಹಕ್ಕು

ಕೊಟ್ಟೂರು.

**ವರದಿ ಪರಶುರಾಮ್.**

# ಮದಕರಿ ನಾಯಕರ ಆಳ್ವಿಕೆ, ಧೈರ್ಯ, ಜನಪರ ಕಾಳಜಿಯನ್ನು ನಾವುಗಳು ನೆನಪಿಸಿಕೊಳ್ಳಬೇಕು: ಶಾಸಕ ಡಾ ಎನ್.ಟಿ ಶ್ರೀನಿವಾಸ್

● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ14.** ಮದಕರಿ ನಾಯಕರ ಆಡಳಿತ, ಅವರ ಧೈರ್ಯ, ಜನಪರ ಕಾಳಜಿಯನ್ನು ನಾವುಗಳು ಅರಿತುಕೊಂಡು ಅವರಿಗೆ ಗೌರವ ಬರುವಂತೆ ನಾವು ಬದುಕಿ ತೋರಿಸಬೇಕು ಎಂದು ಶಾಸಕ ಡಾ ಎನ್.ಟಿ ಶ್ರೀನಿವಾಸ್ ಹೇಳಿದರು. ತಾಲೂಕಿನ ಕಾನ ಹೊಸಹಳ್ಳಿ ಪಟ್ಟಣದಲ್ಲಿ ಆಯೋಜಿಸಿದ್ದ ರಾಜ ವೀರ ಮದಕರಿ ನಾಯಕ ಜಯಂತೋತ್ಸವ ಹಾಗೂ ಪ್ರತಿಮೆ ಲೋಕಾರ್ಪಣೆಯನ್ನು ನೆರವೇರಿಸಿ ಬಳಿಕ ದಿ.ಮಾಜಿ ಶಾಸಕ ಎನ್.ಟಿ. ಬೊಮ್ಮಣ್ಣನವರ ವೇದಿಕೆ ಸಭೆಯಲ್ಲಿ ಮಾತನಾಡಿದ ಅವರು ರಾಜ ವೀರ ಮದಕರಿ ನಾಯಕರು ಶೌರ್ಯ, ಸಾಹಸ ಮತ್ತು ಪರಾಕ್ರಮದಿಂದಲೇ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕವಾದ ಸುಧಾರಣೆಗಳನ್ನು ಜಾರಿಗೆ ತಂದರು. ಅವರು ಅಂದಿನ ರಾಜಪ್ರಭುತ್ವದಲ್ಲಿ ಒಳ್ಳೆಯ ಆಡಳಿತ ಕೊಟ್ಟು ಜನಮಾನಸದಲ್ಲಿ ಉಳಿದಿರುವಂತದ್ದನ್ನು ಇಂತಹ ಜಯಂತಿ ಮೂಲಕ ನೆನಪಿಸಿಕೊಳ್ಳುವ ನಿಟ್ಟಿನಲ್ಲಿ ಇಂದಿನ ತಲೆಮಾರಿನ ಜನರಿಗೆ ಮುಟ್ಟಿಸುವಂತದ್ದು ಸಂತಸ ತಂದಿದೆ. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಅಡಿಯಲ್ಲಿ ನಾವು ಎಲ್ಲರೂ ಸಾಗೋಣ. ಕ್ಷೇತ್ರದ ಜನರ ತಾಳ್ಮೆಯಿಂದ ನನಗೆ ಸಹಕಾರ ಕೊಟ್ಟರೇ ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಒಂದು ಮಾದರಿ ಕ್ಷೇತ್ರವನ್ನಾಗಿ ಮಾಡಲು ಪಣತೊಡುವೆ. ಕ್ಷೇತ್ರದಲ್ಲಿ ಎಲ್ಲಾ ಸಮಾಜದ ಮಹಾನುಭಾವರ ಪುತ್ಥಳಿಗಳನ್ನು ನಿರ್ಮಿಸಲು ನಾನು ಶ್ರಮಿಸುತ್ತೇನೆ ಎಂದರು.

ಈ ವೇಳೆ ಮೊಳಕಾಲ್ಮೂರು ಕ್ಷೇತ್ರದ ಶಾಸಕ ಎನ್. ವೈ ಗೋಪಾಲಕೃಷ್ಣ ಅವರು ಮಾತನಾಡಿ ಮದಕರಿ ನಾಯಕರ ಆಡಳಿತ, ಅವರ ಧೈರ್ಯ, ಜನಪರ ಕಾಳಜಿ ನಾವು ತಿಳಿದುಕೊಂಡು ಅವರಿಗೆ ಗೌರವ ಬರುವ ರೀತಿ ನಡೆದುಕೊಳ್ಳಬೇಕು. ಜನಾಂಗದ ಅಭಿವೃದ್ಧಿಗೆ ಶಿಕ್ಷಣ ಮುಖ್ಯ. ವಾಲ್ಮೀಕಿ ಜನಾಂಗದ ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು. ವಾಲ್ಮೀಕಿ ಯುವಕ ಸಂಘ ಈ ದಿಸೆಯಲ್ಲಿ ಹೆಚ್ಚು ಪ್ರಯತ್ನಶೀಲರಾಗಬೇಕು ಎಂದು ಕಿವಿಮಾತು ಹೇಳಿದರು.





ಈ ಸಂದರ್ಭದಲ್ಲಿ ದ್ರಾಕ್ಷಾರಸ ಮಂಡಳಿ ಅಧ್ಯಕ್ಷ ಯೋಗೇಶ್ ಬಾಬು, ದಿವ್ಯ ಸಾನಿಧ್ಯ ವಹಿಸಿದ ಶ್ರೀಗಳಾದ ಪ್ರಸನ್ನಾನಂದ ಪುರಿ ಮಹಾಸ್ವಾಮಿಗಳು, ಶ್ರೀ ವರದಾನೇಶ್ವರ ಮಹಾಸ್ವಾಮಿಗಳು, ಶ್ರೀ ಷ-ಬ್ರ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿಯವರು. ಶ್ರೀ ದಾ.ಮ. ಐಮಡಿ ಶರಣಾರ್ಯರು. ಶ್ರೀ ಬಸವಲಿಂಗ ಸ್ವಾಮಿಗಳು, ವಾಲ್ಮೀಕಿ ಸಂಘದ ಅಧ್ಯಕ್ಷ ಸುರೇಶ, ಪ್ರಾಧ್ಯಾಪಕರಾದ ಡಾ. ವೆಂಕಟಗಿರಿ ದಳವಾಯಿ, ವೆಂಕಟೇಶ, ಮಾಜಿ ಜಿ.ಪಂ ಸದಸ್ಯ ಶಶಿಧರಸ್ವಾಮಿ, ಬಿಡಿಸಿಸಿ ಅಧ್ಯಕ್ಷ ಕೆ. ಟಿ. ತಿಪ್ಪೇಸ್ವಾಮಿ, ಮುಖಂಡರಾದ ಎನ್.ಟಿ ತಮ್ಮಣ್ಣ, ಎಸ್.ಪಿ. ಪ್ರಕಾಶ್, ಗುಂಡುಮುಣುಗು ಮಂಜಣ್ಣ, ಪಾಪನಾಯಕ, ಜಿ.ಓ. ಓಬಣ್ಣ, ಸೂರ್ಯ ಪ್ರಕಾಶ, ಡಾ. ಟಿ. ಓಂಕಾರಪ್ಪ, ತಳವಾರ ಶರಣಪ್ಪ, ಮಾರಪ್ಪ, ಕುರಿಹಟ್ಟಿ ಬೋಸಣ್ಣ, ಡಿಎಸ್ಎಸ್ ತಾಲೂಕ ಅಧ್ಯಕ್ಷ ಗಂಗಾಧರ, ಬಿ.ಟಿ ಗುದ್ದಿ ದುರುಗಪ್ಪ ಪಸಲು ಪಾಲಯ್ಯ, ಲಾಯರ್ ಬೋರಣ್ಣ, ದಾಸಣ್ಣ, ರಾಮಚಂದ್ರಪ್ಪ ಗ್ರಾಪಂ ಅಧ್ಯಕ್ಷ ಹೂಡೇಂ, ಗ್ರಾ.ಪಂ ಸರ್ವ ಸದಸ್ಯರು, ಖಾನಹೊಸಹಳ್ಳಿ ಗ್ರಾಮದ ಹಿರಿಯರು, ವಾಲ್ಮೀಕಿ ಸಮುದಾಯ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

**ವರದಿ ಹೆಚ್ಚು ವೀರಣ್ಣ.**

# ಕೆರೆ ಕೋಡಿಯಲ್ಲಿ ಲೀಕೆಜ್ : ಕೆರೆಗೆ ಸಣ್ಣ ನೀರಾವರಿ ಇಲಾಖೆಯ ಕಾರ್ಯಾನಿರ್ವಹಾಕ ಅಧಿಕಾರಿ ನವೀನ್ ಕುಮಾರ್

● ವಾರ್ತಾಲೋಕ ವಾರ್ತೆ

**ವಿಜಯನಗರ:** ಜಿಲ್ಲೆಯ ಕೊಟ್ಟೂರು ಕೆರೆಗೆ ಸಣ್ಣ ನೀರಾವರಿ ಇಲಾಖೆ ಯ ಕಾರ್ಯಾನಿರ್ವಹಾಕ ಅಧಿಕಾರಿ ನವೀನ್ ಕುಮಾರ್ ಧಿಡೀರ್ ಬೇಟಿ ಕೆರೆಯ ಕೋಡಿ ಮತ್ತು ರಾಜಾಕಾಲುವೆ ಒತ್ತುವರಿ ಪರಿಶೀಲಿಸಿದರು

ಕೆರೆ ಕೋಡಿ ಯಲ್ಲಿ ಲೀಕೆಜ್ ಬಗ್ಗೆ ಮಾಧ್ಯಮಗಳಲ್ಲಿ ಪ್ರಸಾರ ವಾಗುತ್ತಿದಂತೆ ಕಾರ್ಯ ಪ್ರವೃತ್ತರಾದ ಅಧಿಕಾರಿಗಳು ಸ್ಥಳ ಪರಿಶೀಲಿಸಿದ ರು ಈ ಸಂದರ್ಭದಲ್ಲಿ ಸಾರ್ವಜನಿಕ ಅಧಿಕಾರಿಗಳನ್ನ ತರಾಟೆಗೆ ತೆಗೆದುಕೊಂಡರು

ಬಿಎಸ್ಸ್ ಆರ್ ಮೂಗಪ್ಪ ಸಣ್ಣ ನೀರಾವರಿ ಅಧಿಕಾರಿಯನ್ನ ತರಾಟೆಗೆ ತೆಗೆದುಕೊಂಡು ಪ್ರತಿ ವರ್ಷ ಸರ್ಕಾರ ದಿಂದ ಬರುವ ಅನುದಾನವನ್ನು ಎಲ್ಲಿ ಖರ್ಚು ಮಾಡಿದ್ದಿರಿ ತೋರಿಸುವಂತೆ ಪಟ್ಟು ಹಿಡಿದರು ಇದರಿಂದ



ಕೆಲವು ವತ್ತು ಅಧಿಕಾರಿಗಳು ತಬ್ಬಿಬ್ಬು ಆದರು ಕೆರೆಗೆ ಸರಿಯಾದ ರಸ್ತೆ ಇಲ್ಲದಿರುವುದು ರಾಜಾಕಾಲುವೆ ದುರಸ್ಥಿ ಗೋಳಿಸದಿರುವುದು ಕೋಡಿ ಲೀಕೆಜ್ ಸರಿಪಡಿಸರದಿರುವುದು ಹೀಗೆ ಹಲವಾರು ಸಮಸ್ಯೆ ಗಳಿಗೆ ಮನವಿ ಪತ್ರ ಕೊಡುವದರ ಮೂಲಕ ಕೂಡಲೇ ಕ್ರಮ ಕೈಗೊಳ್ಳಬೇಕು ಇಲ್ಲದಿದ್ದರೆ ಎಲ್ಲಾ ಸಂಘಟನೆ ಗಳೊಂದಿಗೆ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪಟ್ಟಣದ ಕೆರೆ ಅಭಿವೃದ್ಧಿಗಾಗಿ ಮಂಜೂರಾಗಿದ್ದ 2 ಕೋಟಿ ರೂ.ಗಳ ಕ್ರಿಯಾ ಯೋಜನೆ ಟೆಂಡರ್‌ಗೆ ಅನುಮೋದನೆ ಸಿಕ್ಕಿಲ್ಲವಾದ್ದರಿಂದ ಕಾಮಗಾರಿ ನಡೆದಿಲ್ಲ ಎಂದು ಸಣ್ಣ ನೀರಾವರಿ ಇಲಾಖೆ ಬಳ್ಳಾರಿ ವಿಭಾಗದ ಇಇ ಕೆ.ವಿ. ನವೀನ್ ಕುಮಾರ್ ಹೇಳಿದರು.

ಅವರು ಕೊಟ್ಟೂರು ಕೆರೆ ಭರ್ತಿಯಾದ ಮತ್ತು ಕೋಡಿಯಲ್ಲಿ ಸಣ್ಣ ರಂದ್ರಗಳಾಗಿದ್ದ ಹಿನ್ನಲೆಯಲ್ಲಿ ಭೇಟ ನೀಡಿ ಭಾನುವಾರ ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದರು.

2022ರಲ್ಲಿ ಕೆರೆ ಅಭಿವೃದ್ಧಿಗಾಗಿ 2 ಕೋಟಿ ರೂ. ಅನುದಾನ ಮಂಜೂರಾಗಿತ್ತು. ಅದರಲ್ಲಿ ಕೆರೆ ಏರಿ ಕಾಮಗಾರಿ, ಹಳೇ ಎರಡು ತೂಬುಗಳನ್ನು ತೆರವು ಮಾಡಿ ಹೊಸ ತೂಬು ನಿರ್ಮಾಣ, ಜೆಪಿ ಬಡಾವಣೆಯಲ್ಲಿ ಕೆರೆಗೆ ಹೋಗುವ ರಸ್ತೆ ಅಭಿವೃದ್ಧಿ ಸೇರಿ ಇತರೆ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆ ಸಿದ್ದವಾಗಿತ್ತು. ಅದಕ್ಕೆ ಟೆಂಡರ್ ಸಹ ಪೂರ್ಣಗೊಂಡಿತ್ತು. ಆದರೆ ನಂತರದಲ್ಲಿ ಬದಲಾದ ಸರಕಾರದಲ್ಲಿ ಟೆಂಡರ್‌ಗೆ ಅನುಮೋದನೆ ಸಿಕ್ಕಿಲ್ಲ. ಆದರೆ ಯೋಜನೆಯ ಅನುದಾನ ವಾಪಸ್ಸಾಗಿಲ್ಲ. ಟೆಂಡರ್‌ಗೆ ಅನುಮೋದನೆ ಸಿಕ್ಕ ನಂತರ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.

ಜಿಲ್ಲೆಯಲ್ಲಿ ಅನೇಕ ಕೆರೆಗಳು ಭರ್ತಿಯಾಗಿರುವ ಹಿನ್ನಲೆಯಲ್ಲಿ ವೀಕ್ಷಿಸಲಾಗುತ್ತಿದೆ. ಅದರಂತೆ ಕೊಟ್ಟೂರು ಕೆರೆ ಕೋಡಿಯ ಅಲ್ಲಲ್ಲಿ ರಂಧ್ರಗಳಾಗಿರುವುದು ಕಂಡು ಬಂದಿತ್ತು. ಅದಕ್ಕೆ ಮರಳು ಚೀಲ ಹಾಕಿ ರಂಧ್ರ ಬಂದ್ ಮಾಡಿದೆ. ಕೆರೆಯಲ್ಲಿ ನೀರು ಸರಿದ ನಂತರ ಕೋಡಿಗೆ ಎರಡೂ ಬದಿಯಲ್ಲಿ ಸಿಸಿ ಹಾಕಿ ಭದ್ರಗೊಳಿಸಲಾಗುವುದು. ಕೆರೆಯ ಏರಿಯಲ್ಲಿನ ಜಂಗಲ್ ಕಟ್ಟಿಂಗ್ ಸಮರ್ಪಕವಾಗಿಲ್ಲ ಎಂಬ ಮಾಹಿತಿ ಇದ್ದು, ಕೂಡಲೇ ಕೆರೆಯಲ್ಲಿ ಕಡಿದು ಬಿಸಾಕಿದ ಗಿಡಗಳನ್ನು ತೆರವು ಮಾಡಲು ಸಿಬ್ಬಂದಿಗೆ ಸೂಚಿಸಿದೆ ಎಂದು ಹೇಳಿದರು.

ಇಲಾಖೆಯ ಕೂಡ್ಲಿಗಿ ಉಪ ವಿಭಾಗದ ಸಹಾಯಕ ಇಂಜಿನಿಯರ್‌ಗಳಾದ ಮೇಡಂ ರಾಜು, ಶ್ರೀಕಾಂತ್ ಇದ್ದರು.

# ನಮ್ಮನ್ನು ಬೇರೆ ಮಾಡುವ ಪ್ರಯತ್ನ ಫಲಿಸುವುದಿಲ್ಲ :ಜನಾರ್ದನ ರೆಡ್ಡಿ





● ವಾರ್ತಾಲೋಕ ವಾರ್ತೆ

**ಬಳ್ಳಾರಿ, ಆ.14:** ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರಸ್ಪರ ಕಡು ವಿರೋಧಿಗಳಂತೆ ಹೋರಾಟ ಮಾಡಿ, ಕಾಂಗ್ರೆಸ್ ಗೆಲುವಿಗೆ ಕಾರಣರಾಗಿದ್ದ ರೆಡ್ಡಿ ಸಹೋದರು ಬಿಜೆಪಿ ಕಚೇರಿಯಲ್ಲಿ ಇಂದು ನಡೆದ ಸಭೆಯಲ್ಲಿ ಒಂದೇ ವೇದಿಕೆಯಲ್ಲಿ ಮೊದಲಬಾರಿಗೆ ಜಂಟಿಯಾಗಿ ಕಾಣಿಸಿಕೊಂಡು ಒಗ್ಗಟ್ಟು ಮೆರೆದರು.

ಭಾರತೀಯ ಜನತಾ ಪಾರ್ಟಿಯ ನಗರದ ಜಿಲ್ಲಾ ಕಚೇರಿಯಲ್ಲಿಇಂದು ಸಕ್ರಿಯ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಸಚಿವ, ಹಾಲಿ ಗಂಗಾವತಿ ಶಾಸಕ ಗಾಲಿ ಜನಾರ್ಧನರೆಡ್ಡಿ, ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ, ಲಕ್ಷ್ಮೀ ಆರುಣಾ ಅವರು ಒಂದೇ ವೇದಿಕೆಯಲ್ಲಿ ಕುಳಿತುಕೊಂಡಿದ್ದು ವಿಶೇಷವಾಗಿತ್ತು. .

ವೇದಿಕೆಯಲ್ಲಿ ಜನಾರ್ದನ ರೆಡ್ಡಿ ಮತ್ತು ಸೋಮಶೇಖರ ರೆಡ್ಡಿ ಅಕ್ಕಪಕ್ಕದಲ್ಲಿ ಕೂರದೆ ನಡುವೆ ಎಂಎಲ್ಸಿ ವೈ.ಎಂ.ಸತೀಶ್ ಇದ್ದರು. ಇಬ್ಬರೂ ಅಣ್ಣತಮ್ಮಂದಿರು ಪರಸ್ಪರ ಮಾತನಾಡಿದ್ದು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ಹೊಸ ಉತ್ಸಾಹಕ್ಕೆ ಕಾರಣವಾಯ್ತು. ಈ ಸಂದರ್ಭದಲ್ಲಿ ಸಚಿವ ಜರ್ನಾರ್ಧನ ರೆಡ್ಡಿ ಮಾತನಾಡಿ, ಚುನಾವಣೆ ದೃಷ್ಟಿಯಿಂದ ನಾವು ಸಹೋದರರು ಪರಸ್ಪರ ವಿರೋಧಿಗೆಳಂತೆ ಚುನಾವಣೆಯಲ್ಲಿ ಹೋರಾಟ ಮಾಡಿದ್ದು ನಿಜ ಆದರೆ ನಾವು ಎಂದಿಗೂ ಒಂದೇ, ಯಾವುದೇ ಕಾರಣಕ್ಕೂ ನಮ್ಮಲ್ಲಿ ಬಿರುಕು ತರುವ ಶಕ್ತಿಗಳ ಪ್ರಯತ್ನ ಫಲಿಸುವುದಿಲ್ಲ ಎಂದು ಗಾಲಿ ಜನಾರ್ದನ್ ರೆಡ್ಡಿ ಹೇಳಿದರು.

ಸಭೆಯಲ್ಲಿ ಶ್ರೀರಾಮುಲು ಗೈರಾಗಿದ್ದು ಎದ್ದು ಕಾಣುತ್ತಿತ್ತು.

ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು, ಡಾ.ಎಸ್.ಜೆ.ವಿ.ಮಹಿಪಾಲ್ , ಸೋಮಶೇಖರ ರೆಡ್ಡಿ, ಗುರುಲಿಂಗನಗೌಡ, ಹೆಚ್.ಹನುಮಂತಪ್ಪ, ಓಬಳೇಶ, ಮಾಜಿ ಮೇಯರ್ ಡಿ. ವೆಂಕಟರಮಣ, ಬುಡಾ ಮಾಜಿ ಅಧ್ಯಕ್ಷ ದಮ್ಮರ್ ಶೇಖರ್ ಸೇರಿದಂತೆ ಇತರರಿದ್ದರು.

# ಬೇಡಿಕೆಗಳಿಗಾಗಿ ತೃತೀಯ ಲಿಂಗಿಗಳಿಂದ ಸ್ವಾಭಿಮಾನ ನಡಿಗೆ

# ಬಿಕ್ಷಾಟನೆ ಬಿಟ್ಟು ಉದ್ಯೋಗ ಪಡೆದುಕೊಳ್ಳುವ ಆಸೆ ಇದೆ, ಪದ್ಮಶ್ರೀ ಮಂಜಮ್ಮ ಸ್ಪಷ್ಟನೆ

● ವಾರ್ತಾಲೋಕ ವಾರ್ತೆ

**ಹೊಸಪೇಟೆ : ಅ14.** ಅಂಬೇಡ್ಕರ್ ಅವರು ಎಲ್ಲರಿಗೂ ಸಹಬಾಳ್ವೆ ಮತ್ತು ಸಮಾನತೆ ಎಂದು ಸಂವಿಧಾನವನ್ನು ಕೊಟ್ಟಿದ್ದಾರೆ ಆದರೆ ನಮ್ಮ ಸಮುದಾಯಕ್ಕೆ ಇದುವರೆಗೂ ಯಾವುದೇ ರೀತಿಯ ಸಮಾನ ಹಕ್ಕುಗಳು ಸಿಗುತ್ತಿಲ್ಲ. ಯಾವುದೇ ಸರ್ಕಾರಗಳು ಬರಲಿ ನಮ್ಮ ಸಮುದಾಯಕ್ಕೆ ಎಲ್ಲಾ ತರಹದ ಸೌಲಭ್ಯಗಳು ಒದಗಿಸಬೇಕು. ಎಲ್ಲಾ ಜಾತಿ ವರ್ಗಗಳಿಗೂ ನಿಗಮಗಳಿವೆ, ನಮ್ಮ ತೃತೀಯ ಲಿಂಗಿಗಳಿಗೆ ನಿಗಮಗಳಿಲ್ಲ. ಮೊದಲು ನಮ್ಮ ಅಭಿವೃದ್ಧಿಗಾಗಿ ನಿಗಮಗಳು ಸ್ಥಾಪನೆ ಮಾಡಬೇಕು. ನಮ್ಮಲ್ಲೂ ವಿದ್ಯಾಭ್ಯಾಸ ಮಾಡಿದವರಿದ್ದಾರೆ ಅವರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಭಾಗ ಮಟ್ಟದಲ್ಲಿ ಮತ್ತು ಎಲ್ಲಾ ಕಾಲೇಜುಗಳಲ್ಲಿ ಅವಕಾಶ ಮಾಡಿಕೊಡಬೇಕು. ನಮ್ಮಲ್ಲಿ ಓದಿದವರು ಇದ್ದಾರೆ ಅವರು ಬಿಕ್ಷಾಟನೆಯನ್ನು ಬಿಟ್ಟು ಉದ್ಯೋಗ ಪಡೆದುಕೊಳ್ಳಬೇಕೆನ್ನುವ ಹಂಬಲ ಇದೆ ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಮಾತಾ ಮಂಜಮ್ಮ ಜೋಗತಿ ಹೇಳಿದರು.

ಲಿಂಗತ್ವ ಮತ್ತು ಅಲ್ಪಸಂಖ್ಯಾತರ ಸರ್ವತೋಮುಖ ಅಭಿವೃದ್ಧಿಗಾಗಿ ಸ್ವಾಭಿಮಾನ ನಡಿಗೆಯನ್ನು ನಗರದಲ್ಲಿ ಹಮ್ಮಿಕೊಂಡಿದ್ದರು.ನಗರದ ಒಡಕರಾಯ ದೇವಸ್ಥಾನದಿಂದ ಮುಖ್ಯ ಬೀದಿಗಳಲ್ಲಿ ಛತ್ರಿಗಳನ್ನು ಹಿಡಿದು ವಾದ್ಯಗಳೊಂದಿಗೆ ನೃತ್ಯ ಮಾಡುತ್ತಾ ತಮ್ಮ ಹಕ್ಕುಗಳು ಬೇಕೆನ್ನುವ ಘೋಷಣೆಗಳನ್ನು ಕೂಗುತ್ತಾ ಅಂಬೇಡ್ಕರ್ ವೃತ್ತದ ವರೆಗೆ ತಲುಪಿ ಮೂರ್ತಿಗೆ ಹೂ ಮಾಲೆಯನ್ನು ಹಾಕಿ ಮಾತನಾಡಿದರು.

ಈ ಸ್ವಾಭಿಮಾನ ಹೋರಾಟವು ನಮ್ಮ ಹಕ್ಕುಗಳಿಗಾಗಿ ಮಾಡುತಿದ್ದೇವೆ. ಸರ್ಕಾರವು ನಮಗೆ ಒಂದು ಪರ್ಸೆಂಟ್ ಮೀಸಲಾತಿಯನ್ನು ನೀಡಿದೆ ಆದರೆ ಅದು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಇಲ್ಲಿಯವರೆಗೆ ನಮಗೆ ಸರ್ಕಾರದ ಸೌಲಭ್ಯಗಳು ಸಿಗುತ್ತಿಲ್ಲ. ಅಂಬೇಡ್ಕರ್ ಅವರು ಎಲ್ಲರಿಗೂ ಸಹಬಾಳ್ವೆ ಮತ್ತು ಸಮಾನತೆ ಎಂದು ಸಂವಿಧಾನವನ್ನು ಕೊಟ್ಟಿದ್ದಾರೆ ಆದರೆ ನಮ್ಮ ಸಮುದಾಯಕ್ಕೆ ಇದುವರೆಗೂ ಯಾವುದೇ ರೀತಿಯ



ಸಮಾನ ಹಕ್ಕುಗಳು ಸಿಗುತ್ತಿಲ್ಲ. ಯಾವುದೇ ಸರ್ಕಾರಗಳು ಬರಲಿ ನಮ್ಮ ಸಮುದಾಯಕ್ಕೆ ಎಲ್ಲಾ ತರಹದ ಸೌಲಭ್ಯಗಳು ಒದಗಿಸಬೇಕು. ಎಲ್ಲಾ ಜಾತಿ ವರ್ಗಗಳಿಗೂ ನಿಗಮಗಳಿವೆ, ನಮ್ಮ ತೃತೀಯ ಲಿಂಗಿಗಳಿಗೆ ನಿಗಮಗಳಿಲ್ಲ. ಮೊದಲು ನಮ್ಮ ಅಭಿವೃದ್ಧಿಗಾಗಿ ನಿಗಮಗಳು ಸ್ಥಾಪನೆ ಮಾಡಿ ಸಾವಿರಾರು ಕೋಟಿ ಹಣ ಇಟ್ಟು ಅಭಿವೃದ್ಧಿಪಡಿಸಬೇಕು. ನಮ್ಮಲ್ಲೂ ವಿದ್ಯಾಭ್ಯಾಸ ಮಾಡಿದವರಿದ್ದಾರೆ ಅವರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಭಾಗ ಮಟ್ಟದಲ್ಲಿ ಮತ್ತು ಎಲ್ಲಾ ಕಾಲೇಜುಗಳಲ್ಲಿ ಅವಕಾಶ ಮಾಡಿಕೊಡಬೇಕು. ನಮ್ಮಲ್ಲಿ ಓದಿದವರು ಇದ್ದಾರೆ ಅವರು ಬಿಕ್ಷಾಟನೆಯನ್ನು ಬಿಟ್ಟು ಉದ್ಯೋಗ ಪಡೆದುಕೊಳ್ಳಬೇಕೆನ್ನುವ ಹಂಬಲ ಇದೆ. ಅದಕ್ಕೆ ಸರ್ಕಾರ ಎಲ್ಲಾ ಕ್ಷೇತ್ರಗಳಲ್ಲೂ ಕಡ್ಡಾಯವಾಗಿ ಉದ್ಯೋಗ ಕೊಡಬೇಕು . ಗುರುತಿನ ಚೀಟಿ ಅಥವಾ ಇತರ ದಾಖಲೆಗಳು ಮಾಡಿಕೊಳ್ಳಲು ನಮ್ಮವರಿಗೆ ದಾಖಲೆಗಳನ್ನು ಕೇಳುತ್ತಿದ್ದಾರೆ, ಇದನ್ನು ಪರಿಗಣಿಸದೆ ಇವರು ತೃತೀಯ ಲಿಂಗಿಗಳು ಮತ್ತು ವಾಸದ ಅವಧಿಯನ್ನು ಸ್ಥಳೀಯ ಆಡಳಿತವು ನಮೂದಿಸಿ ಕೊಡಬೇಕು ಅದರ ಮುಖಾಂತರ ದಾಖಲೆಗಳನ್ನು ಮಾಡಿಕೊಳ್ಳುತ್ತಾರೆ . ಅವರು ಎಲ್ಲೇ ಇರಲಿ ಉದ್ಯೋಗ ಮತ್ತು ವಸತಿ ಯೋಜನೆಯನ್ನು ಕಡ್ಡಾಯವಾಗಿ ಕಲ್ಪಿಸಿ ಕೊಡಬೇಕು. ಸರ್ಕಾರ ಈ ನಮ್ಮ ಬೇಡಿಕೆಗಳಿಗೆ ಎಲ್ಲಿವರೆಗೂ ಈಡೇರಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಹೇಳಿದರು.

ನಿಶಾ ಗುಳ್ಳೂರು ಮಾತನಾಡಿ ಸರ್ಕಾರ ನಮ್ಮ ಹಕ್ಕುಗಳನ್ನು ಈಡೇರಿಸಬೇಕು. ಕುಟುಂಬ ಸಮಾಜ ಮತ್ತು ನಮ್ಮನ್ನು ಆಳುವ ಸರ್ಕಾರಗಳು ಈ ಮೂರು ವಲಯಗಳಲ್ಲಿ ದೊಡ್ಡಮಟ್ಟದ ಬದಲಾವಣೆ ಬಂದರೆ ಮಾತ್ರ ಅಂಬೇಡ್ಕರ್ ಅವರು ಹೇಳಿರುವ ಸಮ ಸಮಾಜವನ್ನು ಕಟ್ಟಲು ಸಾಧ್ಯವಾಗುತ್ತದೆ. ಈ ಮೂರು ವಲಯಗಳಲ್ಲಿ ಬದಲಾಗಬೇಕೆಂದು ಇಂದಿನ ಹೋರಾಟ ಪ್ರಾರಂಭಿಸಿದ್ದೇವೆ, ನಮ್ಮ ಕುಟುಂಬಗಳಲ್ಲಿ ಪರಿವರ್ತನೆ ಆಗಬೇಕಕಿದೆ. ಜನಪ್ರತಿನಿದಿಗಳು ನಮಗಾಗಿ ಕಾನೂನುಗಳನ್ನು ರಚಿಸಬೇಕು. ನಮ್ಮ ಅಭಿವೃದ್ಧಿಗೆ ಆದ್ಯತೆ ಕೊಡಬೇಕು ಎಂದರು.

ಹಕ್ಕೊತ್ತಾಯಗಳು : ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಸರ್ವತೋಮುಖ ಅಭಿವೃದ್ಧಿಗಾಗಿ ನಿಗಮ ಸ್ಥಾಪಿಸಬೇಕು.

1% ಮೀಸಲಾತಿ ಅಡಿಯಲ್ಲಿ ಉದ್ಯೋಗವನ್ನು ಪಡೆಯಲು ಸರ್ಕಾರವು ಲಿಂಗತ್ವ ಅಲ್ಪಸಂಖ್ಯಾತರಿಗೆ ತರಬೇತಿ ನೀಡಬೇಕು.

ಎಲ್ಲಾ ಲಿಂಗತ್ವ ಅಲ್ಪಸಂಖ್ಯಾತರಿಗೆ ಬಿ.ಪಿ.ಎಲ್. ರೇಷನ್ ಕಾರ್ಡ್ ನೀಡಬೇಕು.

ಉದ್ಯಮಶೀಲತೆಯಲ್ಲಿ ತೊಡಗಿಕೊಳ್ಳಲು ಪ್ರತಿ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗೆ 200,000 ಲಕ್ಷ ನೆರವು ನೀಡಬೇಕು.

ಕರ್ನಾಟಕ ಬಿಕ್ಷಾಟನೆಯ ನಿಷೇಧ ಕಾಯ್ದೆಯನ್ನು ರದ್ದುಪಡಿಸುವ ಮೂಲಕ ಭಿಕ್ಷಾಟನೆಯನ್ನು ನಿರಪರಾಧೀಕರಣ ಗೊಳಿಸಬೇಕು.

ಮಹೇಶ್ ಪಾಟೀಲ್ ಸಂಗಮ ಮಿತ್ರ ಕೋಆರ್ಡಿನೇಟರ್, ಸಣ್ಣ ಮಾರಪ್ಪ, ವೀಣಾ, ಸುಧಾ ಗ್ರಾಮ ಪಂಚಾಯತ್ ಸದಸ್ಯರು, ವಡ್ಡರ ಮಂಜಮ್ಮ,ಶಹನಾಜ್ ಬಿ , ಮಂಜಮ್ಮ ಕೆ, ಶಾಲಿನಿ, ಪೂರ್ತಿ, ಲಕ್ಷ್ಮೀ, ಪ್ರಗತಿ ಎಂ ಬಿ, ಕಾವ್ಯ, ಶ್ರುತಿ ಇತರರಿದ್ದರು.

**ವರದಿ ಎ ಚಿದಾನಂದ.**

## ದೇವಿಪುರಾಣ ಮಂಗಲೋತ್ಸವದಲ್ಲಿ 1001ಮಂದಿ ಮುತ್ತೈದಿಯರಿಗೆ ಉಡಿತುಂಬುವಕಾರ್ಯಕ್ರಮ

# ಸತಿ-ಪತಿಗಳು ಒಂದಾಗಿ ಬಾಳಿದರೆ ಅದೇ ಸ್ವರ್ಗ-ಜಗದ್ಗುರುಶ್ರೀಬಸವಲಿಂಗಮಸ್ವಾಮಿ

● ವಾರ್ತಾಲೋಕ ವಾರ್ತೆ

**ಕುರುಗೋಡು.ಆ.13** ನಿತ್ಯ ಸಂಸಾರದಲ್ಲಿ ಸತಿ-ಪತಿಗಳು ಒಂದಾಗಿ ಬಾಳಿದರೆ ಅದುವೆ ನಿಜವಾದ ಸ್ವರ್ಗ ಎಂದು ಕೊಟ್ಟೂರುಮಹಾಸಂಸ್ಥಾನದಮಠದ ಜಗದ್ಗುರು ಕೊಟ್ಟೂರು ಶ್ರೀಬಸವಲಿಂಗಮಹಾಸ್ವಾಮಿಗಳು ಹೇಳಿದರು.

ಅವರು ಶರನ್ನವರಾತ್ರಿ ನಿಮಿತ್ತ ಪಟ್ಟಣದ ಕೊಟ್ಟೂರುಸ್ವಾಮಿಶಾಖಾಮಠದಲ್ಲಿ ಮಠದ ಸೇವಾಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ದೇವಿಪುರಾಣ ಕಾರ್ಯಕ್ರಮದ ಮಂಗಲೋತ್ಸವದ ಕಾರ್ಯಕ್ರಮದ ನಿಮಿತ್ತ ಶ್ರೀಮಠದಿಂದ 1001ಮಂದಿ ಮುತ್ತೈದಿ ಮಹಿಳೆಯರಿಗೆ ಉಡಿತುಂಬುವ ಕಾರ್ಯಕ್ರಮದಲ್ಲಿ ಸಾನಿಧ್ಯವ ಹಿಸಿಮಾತನಾಡಿದ ಅವರು, ಗುರುಪರಂಪರೆಯುಳ್ಳ ಕೊಟ್ಟೂರುಸ್ವಾಮಿಮಠವು ಯಾವುದೇ ಜಾತಿ, ಧರ್ಮ, ಪಂತಕ್ಕೆ ಸೀಮಿತವಾಗಿಲ್ಲ. ಇಲ್ಲಿ ಎಲ್ಲಾ ಜಾತಿ, ಧರ್ಮದ ಭಕ್ತರು ಸೇವೆ ಮಾಡುತ್ತಿದ್ದಾರೆ. ಆದ್ದರಿಂದ ಸರ್ವಧರ್ಮಿಯರ ತೋಟ ಶ್ರೀಕೊಟ್ಟೂರುಸ್ವಾಮಿಮಠ ಎಂದು ಮಠದ ಮಹತ್ವ ಹಾಗು ಕಾರ್ಯವೈಖರಿ ಬಗ್ಗೆ ತಿಳಿಸಿದರು.



ಕುರುಗೋಡು ಶಾಖಾಮಠದ ಪೀಠಾಧಿಪತಿ ಶ್ರೀನಿರಂಜನಪ್ರಭುದೇವರು ಪ್ರಸ್ತಾವಿಕವಾಗಿ ಮಾತನಾಡಿ, ಪುರಾಣ ಆರಂಭದಿಂದ-ಮಂಗಲೋತ್ಸವದವರೆಗೂ ಪುರಾಣ-ಪ್ರವಚನ ಯಶಸ್ವಿಯಾಗಿ ಜರುಗಲು ಕಾರಣೀಕರ್ತರು, ಸೇವಾಸಮಿತಿ ಮುಖಂಡರ ಪರಿಶ್ರಮದಿಂದ ಯಶಸ್ವಿಯಾಗಿ ಜರುಗಿದೆ. ಕೊಟ್ಟೂರೇಶನು ಅವರಿಗೆ ಸುಖ, ಸಂಪತ್ತು, ನೆಮ್ಮದಿ ಕೊಟ್ಟು ಕಾಪಾಡಲಿ ಎಂದು ಹಾರೈಸಿದರು. ಕಂಪ್ಲಿಕ್ಷೇತ್ರದ ಶಾಸಕ ಜೆಎನ್.ಗಣೇಶ ಮಾತನಾಡಿ, ಕೊಟ್ಟೂರುಸ್ವಾಮಿಮಠದ ಅಭಿವೃದ್ಧಿ ವಿಚಾರದಲ್ಲಿ ಯಾವುದೇ ಸಂದರ್ಭಬಂದರೂ ನನ್ನಿಂದ ಸಹಾಯ-ಸಹಕಾರ ನೀಡುವುದಾಗಿ ಭರವಸೆ ನೀಡಿದರು. ನಂತರ 1001 ಮಂದಿ ಮುತ್ತೈದಿಮಹಿಳೆಯರಿಗೆ ಜಗದ್ಗುರುಶ್ರೀಬಸವಲಿಂಗಮಹಾಸ್ವಾಮಿಗಳ ಸಾನಿಧ್ಯದಲ್ಲಿ ಉಡಿತುಂಬುವ ಕಾರ್ಯ ಸಾಂಗೋಪವಾಗಿ ಜರುಗಿತು. ಚಾನಾಳು ಆನಂದ, ಮತ್ತು ಚಾನಾಳುಅಂಬರೇಷ್ ಅವರ ಕುಟುಂಬವು ಕಾರ್ಯಕ್ರಮಕ್ಕೆ ಬಂದಂತಹ ಸಾವಿರಾರುಮಂದಿ ಭಕ್ತರಿಗೆ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಿ ಭಕ್ತಿಮೆರೆದರು. ಶ್ರೀಧರಗಡ್ಡೆಮಠದ ಶ್ರೀಮರಿ ಕೊಟ್ಟೂರುದೇಶಿಕರು ಪುರಾಣಕಾರ್ಯಕ್ರಮದಲ್ಲಿ ಪ್ರವಚನ ನೀಡಿ ಮಾತನಾಡಿದರು. ಕಲಾವಿದ ನಾಗನಗೌಡರು ಪಠಣಕಾರರಾಗಿ ಸೇವೆಸಲ್ಲಿಸಿದರು. ಕಲಾವಿದ ಶೇಖರಯ್ಯಸ್ವಾಮಿ ತಬಲಾಸಾಥ್ ನೀಡಿದರು. ಕೊನೆಯಲ್ಲಿ ಈ ಮಠದ ಅರ್ಚಕ ಶ್ರೀವಿಜಯಕುಮಾರಶಾಸ್ತ್ರಿ, ಎಸ್‌ಟಿಎಂ.ಸದಾಶಿವಯ್ಯಸ್ವಾಮಿ, ಚಾನಾಳುಅಭಿ ಕಾರ್ಯಕ್ರಮ ನಿರ್ವಹಿಸಿದರು.

ಪುರಸಭೆ ಅಧ್ಯಕ್ಷ ಟಿ.ಶೇಖಣ್ಣ, ಉಪಾಧ್ಯಕ್ಷ ಸಿ.ಮಲ್ಲಿಕಾರ್ಜುನ, ಪುರಸಭೆಸದಸ್ಯರು, ತುಂಗಭದ್ರರೈತಸಂಘದ ಅಧ್ಯಕ್ಷ ಪುರುಷೋತ್ತಮಗೌಡ, ವೀರಶೈವ ಮಹಾಸಭಾ ಅಧ್ಯಕ್ಷ ಎ.ಶರಣಬಸವ, ಮಠದ ಸೇವಾಸಮಿತಿ ಮುಖಂಡರು, ಜಗದ್ಗುರುಕೊಟ್ಟೂರುಸ್ವಾಮಿ ಸೇವಾಬಳಗದ ಕಾರ್ಯಕರ್ತರು, ಬಾದನಹಟ್ಟಿ, ವದ್ದಟ್ಟಿ, ಗೆಣಿಕೆಹಾಳು, ಬಸಾಪುರ, ಯಲ್ಲಾಪುರ, ಸೋಮಸಮುದ್ರ, ಬಳ್ಳಾರಿ ಸೇರಿದಂತೆ ಇತರೆ ಗ್ರಾಮದ ಸದ್‌ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿ, ಶ್ರೀಕೊಟ್ಟೂರುಮಹಾಸ್ವಾಮಿಯ ಕೃಪೆಗೆ ಪಾತ್ರರಾದರು.

# 7ನೇ ವೇತನ ಆಯೋಗದ ಆರ್ಥಿಕ ಸೌಲಭ್ಯ ಒದಗಿಸಿ



**ಹುನಗುಂದ:** ಏಳನೇ ವೇತನ ಆಯೋಗದ ಆರ್ಥಿಕ ಸೌಲಭ್ಯಗಳು ನಮಗೂ ಒದಗಿಸಬೇಕೆಂದು ಆಗ್ರಹಿಸಿ ತಾಲೂಕು ನಿವೃತ್ತ ನೌಕರರ ವೇದಿಕೆ ಅಧ್ಯಕ್ಷ ಎಂ.ಬಿ. ಗಂಜಿಹಾಳ ಸರ್ಕಾರಕ್ಕೆ ಆಗ್ರಹಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜುಲೈ 1, 2022ರಿಂದ ಜುಲೈ 31, 2024ರ ಅವಧಿಯಲ್ಲಿ ನಿವೃತ್ತರಾದ ನೌಕರರಿಗೆ ಪರಿಷ್ಕೃತ ವೇತನದ ಶ್ರೇಣಿಯಲ್ಲಿ ಸೌಲಭ್ಯಗಳು ದೊರೆಯುತ್ತಿಲ್ಲ. ಸೌಲಭ್ಯಗಳಾದ ಡಿಸಿಆರ್‌ಜಿ, ಕಮ್ಯುಟೇಸನ್, ಇಎಲ್-ಎನ್ ಕ್ಯಾಶ್ಮೆಂಟ್ ಲೆಕ್ಕಚಾರದಲ್ಲಿ ತುಂಬ ವ್ಯತ್ಯಾಸವಿದ್ದು, ಅದನ್ನು ಸರಿಪಡಿಸಿ ನ್ಯಾಯೋಚಿತವಾಗಿ ಆರ್ಥಿಕ ಸೌಲಭ್ಯಗಳನ್ನು ದೊರಕಿಸಿಕೊಡಬೇಕು. ಈಗಾಗಲೇ ಈ ಕುರಿತು ನಿವೃತ್ತ ನೌಕರರು ರಾಜ್ಯಾದ್ಯಂತ ಹೋರಾಟಗಳನ್ನು ನಡೆಸಲಾಗಿದೆ. ಮುಖ್ಯಮಂತ್ರಿ ಸೇರಿ ಸಂಬಂಧಿಸಿದವರಿಗೆ ಮನವಿ ಸಲ್ಲಿಸಲಾಗಿದೆ. ಶೀಘ್ರ ನಮ್ಮ ಬೇಡಿಕೆಗಳನ್ನು ಈಡೇ-ರಿಸದಿದ್ದರೆ ಉಗ್ರ ಹೋರಾಟ ಮಾಡಬೇಕಾಗುವುದೆಂದು ಎಚ್ಚರಿಸಿದರು.

ನಿವೃತ್ತ ನೌಕರರ ತಾಲೂಕು ಘಟಕದ ಅಧ್ಯಕ್ಷ ಎ.ಕೆ. ಉಪನಾಳ ಮಾತನಾಡಿ, ಆರ್ಥಿಕ ಸೌಲಭ್ಯಗಳನ್ನು ದೊರಕಿಸಿ ಕೊಡುವಂತೆ ನಿವೃತ್ತ ನೌಕರರು ನಡೆಸುತ್ತಿರುವ ಹೋರಾಟಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ತಿಳಿಸಿದರು. ನಿವೃತ್ತ ನೌಕರರ ವೇದಿಕೆ ಜಿಲ್ಲಾ ಸಂಚಾಲಕ ಎ.ಆರ್. ನಡುವಿನಮನಿ, ಬಿ.ಆರ್. ಮಸ್ಕಿ ಇದ್ದರು.

# ದೀನ, ದಲಿತರಿಗೆ ಕಾನೂನು ನೆರವು ಕೊಡುವ ಕೆಲಸವಾಗಲಿ



**ಇಳಕಲ್ಲ(ಗ್ರಾ):** ಅಸಹಾಯಕರು, ದೀನ ದಲಿತರಿಗೆ ಕಾನೂನು ನೆರವು ಒದಗಿಸುವ ಕೆಲಸ ಪ್ರಾಮಾಣಿಕವಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದು ನ್ಯಾಯಮೂರ್ತಿ ಚಂದ್ರಶೇಖರ ದಿಡ್ಡಿ ಹೇಳಿದರು.

ಇಲ್ಲಿನ ಅಂಬೇಡ್ಕರ್ ಭವನದಲ್ಲಿ ಬುಧವಾರ ಹಮ್ಮಿಕೊಂಡ ಕಾನೂನು ಅರಿವು ನೆರವು ಮತ್ತು ಲೋಕಾಯುಕ್ತ ಇಲಾಖೆಯಿಂದ ಸಾರ್ವಜನಿಕ ಕುಂದುಕೊರತೆ ಅಹವಾಲು ಸ್ವೀಕಾರ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ಸಾಕಷ್ಟು ಸೌಲಭ್ಯಗಳನ್ನು ಕೊಟ್ಟಿದೆ. ಅದರ ಫಲ ಜನರಿಗೆ ಸಿಗುವಂತಾಗಬೇಕು ಎಂದರು.

ಲೋಕಾಯುಕ್ತರು ಸಾರ್ವಜನಿಕರ ಕುಂದುಕೊರತೆ ಕೇಳಲು ಆರಂಭಿಸಿದಾಗ ಜನರು ತಮ್ಮ ಸಮಸ್ಯೆ ತೋಡಿಕೊಳ್ಳಲು ಆರಂಭಿಸಿದರು.

ಹಲವಾರು ಇಲಾಖೆಗಳ ಅಧಿಕಾರಿಗಳು ಆಗಮಿಸಿ ತಮ್ಮ ತಮ್ಮ ಇಲಾಖೆಯಲ್ಲಾದ ಸಾಧನೆಗಳ ಕುರಿತು ವಿವರಣೆ ನೀಡಿದರು.

ಬಾಗಲಕೋಟದ ಸಿದ್ಧೇಶ್ವರ ರೆಡ್ಡಿ, ಲೋಕಾಯುಕ್ತ ಇನ್ಸ್‌ಪೆಕ್ಟರ್ ಭೀಮನಗೌಡ ಬಿರಾದಾರ, ಬಸವರಾಜ ಲಮಾಣಿ, ಬಸವರಾಜ ಮೂಕರ್ತಿಹಾಳ, ಪೌರಾಯುಕ್ತ ಶ್ರೀನಿವಾಸ ಜಾಧವ ಇದ್ದರು.

ತಹಸೀಲ್ದಾರ್ ಸತೀಶ್ ಕೂಡಲಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈಶ್ವರ ಗಡ್ಡಿ ಸ್ವಾಗತಿಸಿದರು. ಮುರಳೀಧರ ದೇಶಪಾಂಡೆ ವಂದಿಸಿದರು.

## ಬಾದನಹಟ್ಟಿಯಲ್ಲಿ ದಸರಾ ಗ್ರಾಮೀಣ ರಂಗೋತ್ಸವದಲ್ಲಿ 'ಭಕ್ತಪ್ರಹ್ಲಾದ' ಬಯಲಾಟ ಪ್ರದರ್ಶನ

# ಗಂಡುಮೆಟ್ಟಿನ ಗ್ರಾಮೀಣ ಬಯಲಾಟ ಕಲೆಯನ್ನು ಪ್ರೋತ್ಸಾಹಿಸಿರಿ : ಹುಲುಗಯ್ಯನಾಯಕರ್

**ಕುರುಗೋಡು.ಅ.14** ಗ್ರಾಮೀಣ ಪ್ರದೇಶಗಳಲ್ಲಿನ ಗಂಡುಮೆಟ್ಟಿನ ಬಯಲಾಟ ಕಲೆ, ಹಾಗು ಬಯಲಾಟ ಕಲಾವಿದರನ್ನು ಹಾಗು ಬಯಲಾಟ ಕಲೆಯನ್ನು ಪ್ರತಿಯೊಬ್ಬರೂ ಉಳಿಸಿ, ಪ್ರೋತ್ಸಾಹಿಸಬೇಕು, ಅಂದಾಗ ಮಾತ್ರ ಬಯಲಾಟ ಕಲೆ ಜೀವಂತವಾಗಿ ನೆಲೆಸಲು ಸಾಧ್ಯ ಎಂದು ರಂಗಬಸವೇಶ್ವರ ಕಲಾಟ್ರಸ್ಟ್‌ನ ಕಾರ್ಯದರ್ಶಿ ಹುಲುಗಯ್ಯನಾಯಕರ್ ಹೇಳಿದರು.

ಅವರು ಸಮೀಪದ ಬಾದನಹಟ್ಟಿ ಗ್ರಾಮದಲ್ಲಿ ರಂಗಬಸವೇಶ್ವರ ಕಲಾಟ್ರಸ್ಟ್ ಕುರುಗೋಡು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಇವರ ಗಿರಿಜನ ಉಪಯೋಜನೆಯಡಿ ದಸರಾ ಗ್ರಾಮೀಣ ರಂಗೋತ್ಸವ-2024 ಕಾರ್ಯಕ್ರಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಭಕ್ತಪ್ರಹ್ಲಾದ ಅಭಿನಯದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂಥಹ ಬಯಲಾಟ ನಾಟಕಗಳ ಅಭಿನಯವನ್ನು ವಿವಿದ ರಾಜ್ಯ, ದೇಶ-ವಿದೇಶಗಳಲ್ಲಿ ಪ್ರದರ್ಶಿಸಿಸಲು ಸರ್ಕಾರ ಮುತುವರ್ಜಿವಹಿಸಿ, ಬಯಲಾಟ ಕಲೆಯನ್ನು ಉಳಿಸಬೇಕೆಂದು ಒತ್ತಾಯಿಸಿದರು.

ಮುದ್ದಟ್ಟನೂರು ಸಂಗೀತನಿರ್ದೇಶಕ ತಿಪ್ಪೇಸ್ವಾಮಿ, ಹಿರಿಯ ಪತ್ರಕರ್ತ ಕೆ.ಭೀಮಣ್ಣ, ಇನ್ನೋರ್ವ ಪತ್ರಕರ್ತ ಕೆ.ವೀರಭದ್ರಗೌಡ, ಮಾತನಾಡಿ, ಬಾದನಹಟ್ಟಿ ಗ್ರಾಮ



ಬಯಲಾಟ ಅಭಿನಯಕ್ಕೆ ಪ್ರಸಿದ್ಧಿಹೊಂದಿದೆ. ಇಂಥಹ ಗ್ರಾಮದಲ್ಲಿ ಗ್ರಾಮಸ್ಥರು ಬಯಲಾಟ ಪ್ರದರ್ಶನಕ್ಕೆ ರಂಗಸಜ್ಜಿಕೆ ನಿರ್ಮಾಣ ಮಾಡಿ, ಬಯಲಾಟ ಕಲೆಗೆ ಪ್ರೋತ್ಸಾಹ ನೀಡಬೇಕೆಂದು ಸಭೆಯಲ್ಲಿ ಒತ್ತಾಯಿಸಿದರು. ಬಾದನಹಟ್ಟಿ ಗ್ರಾಪಂ. ಅಧ್ಯಕ್ಷ ಕರಿಬ್ಯಾಡರಕರೆಣ್ಣ, ಉಪಾಧ್ಯಕ್ಷ ಮೇಟಿಕರಿಬಸಮ್ಮ, ಮಾಜಿಅಧ್ಯಕ್ಷ ಮೆಟ್ರಿಕೆಸಿದ್ದೇಶ, ಹಿರಿಯಮುಖಂಡ ಪಿ.ದೊಡ್ಡಬಸಪ್ಪ, ಪಿ.ತಿಮ್ಮಪ್ಪ, ಬಯಲಾಟದ ಮ್ಯಾನೇಜರ್ ಪಿ.ಕರೆಣ್ಣ, ಮೇಟಿಆಗಲೂರಪ್ಪ, ಕರಿಗೂಳಪ್ಪನಮಗಆಗಲೂರಪ್ಪ, ನೆಲ್ಲುಡಿಪೊಂಪಾಪತಿ, ಗಾಳಿಕರಿಬಸಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಎದ್ದಾರಿಕರಿಬಸಪ್ಪ, ಸಂಗೀತಶಿಕ್ಷಕ ಕರಿಬಸವನಗೌಡ, ಗ್ರಾಮಪಂಚಾಯಿತಿಯ ಎಲ್ಲಾ ಸದಸ್ಯರು, ಊರಿನ ಮುಖಂಡರು ಇದ್ದರು. ಅಪೂರ್ವ ಜಿ.ಮತ್ತು ತಂಡದವರಿಂದ ಭರತನಾಟ್ಯ, ಎರ್ರಿನಾಗೇಶ ತಂಡದವರಿಂದ ಸುಗಮಸಂಗೀತ, ಎಮ್ಮಿಗನೂರು ಜಡೇಶ ಮತ್ತು ತಂಡದವರಿಂದ ಜನಪದಗಾಯನ, ತಿಪ್ಪೇಸ್ವಾಮಿ ಮತ್ತು ತಂಡದವರಿಂದ ಬಯಲಾಟರಂಗಗೀತೆಗಳು, ರಂಗಸಜ್ಜಿಕೆಯನ್ನು ಕಲ್ಲುಕಂಬ ಕರ್ಣಾಚಾರಿ, ಹನುಮಯ್ಯನವರು ಸಾರಥಿಯಾಗಿ, ತಬಲಾ ಕೆ.ನಾಗೇಶ, ರಿಧಮ್‌ಪ್ಯಾಡ್ ಪಾಂಡು ಭಾಗವಹಿಸಿ ಸೇವೆಗೈದರು. ಕೊನೆಯಲ್ಲಿ ಬಾದನಹಟ್ಟಿ ಗ್ರಾಮದ ಯುವಬಯಲಾಟ ಕಲಾವಿದರಿಂದ 'ಭಕ್ತಪ್ರಹ್ಲಾದ' ಎಂದ ಸುಂದರ ಬಯಲಾಟವನ್ನು ಅದ್ದೂರಿಯಿಂದ ಪ್ರದರ್ಶನಮಾಡಲಾಯಿತು. ಬಯಲಾಟದಲ್ಲಿ ಸ್ತ್ರೀಪಾತ್ರದಾರಿಯಾದ ವೈಟ್‌ಸುಮಾ ಇವರ ಮನಮೋಹಕ ನೃತ್ಯರೂಪಕ ಹಾಗು ವಿದ್ಯಾರ್ಥಿಗಳ ಭರತನಾಟ್ಯ ನೃತ್ಯರೂಪಕಗಳು ನೋಡಿ ಎಲ್ಲರೂ ಚಪ್ಪಾಳೆತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು.

# ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದೇ ಉದ್ದೇಶ

**ಹುನಗುಂದ:** ಕಾಲಮಿತಿ ಬಡ್ತಿ ಬಾಕಿ ವೇತನ, ಎಚ್‌ಆರ್‌ಎಂ-ಎಸ್‌ದಲ್ಲಿ ಹೆಸರು ತಿದ್ದುಪಡಿ ಸೇರಿ ತಾಲೂಕು ಶಿಕ್ಷಕರ ಹಲವು ಸಮಸ್ಯೆಗಳನ್ನು ಚರ್ಚಿಸಿ ಸ್ಥಳದಲ್ಲೇ ಕೆಲವು ಬಗೆಹರಿಸಲಾಯಿತೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಾಸ್ಮಿನ್ ಕಿಲ್ಲೇದಾರ ಹೇಳಿದರು.

ಪಟ್ಟಣದ ಬಿಇಒ ಕಚೇರಿಯಲ್ಲಿ ಬುಧವಾರ ಶಿಕ್ಷಣ ಇಲಾಖೆ ಕಮೀಷನರ್ ಆದೇಶಿದಂತೆ ಶಾಲಾ ಶಿಕ್ಷಣ ಇಲಾಖೆ, ಜಿಪಂ, ಬಿಇಒ ಮತ್ತು ಬಿಆರ್‌ಸಿ ಸಹಯೋಗದಲ್ಲಿ ನಡೆಸಿದ 2023-24ರ ತಾಲೂಕುಮಟ್ಟದ ಶಿಕ್ಷಣ ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಶಿಕ್ಷಕರ ಮನವಿ ಸ್ವೀಕರಿಸಿ ಅವರು



ಮಾತನಾಡಿದರು.

ಶಿಕ್ಷಕರು ತಮ್ಮ ಸಮಸ್ಯೆಗಳನ್ನು ಇತ್ಯರ್ಥಕ್ಕೆ ಅರ್ಜಿ ಸಲ್ಲಿಸಿ ಪರಿಹಾರ ಕಾಣುವುದೇ ಈ ಅದಾಲತ್ ಉದ್ದೇಶ ಎಂದರು. ಹುನಗುಂದ ಶಿಕ್ಷಕ ಸಂಘದ ಅಧ್ಯಕ್ಷ ಸಂಗಮೇಶ ಪಾಟೀಲ, ಇಲಕಲ್ಲ ಅಧ್ಯಕ್ಷ ರಂಗನಾಥ ಮಾಸರಡ್ಡಿ, ಪರಶುರಾಮ ಪಮ್ಮಾರ, ಮುತ್ತು ಬೀಳಗಿ, ರಮೇಶ ಕೊಳಗೇರಿ, ರಮೇಶ ಮಿಣಜಗಿ, ಮಹಾಗುಂಡಪ್ಪ ಹನಮಸಾಗರ ಎಂ.ಟಿ. ನಡುವಿನಮನಿ, ಅಂದಾನಯ್ಯ ವಸದ, ಎಸ್.ಜಿ. ಹುದ್ದಾರ, ವೈ.ಎಂ. ಲೈನ್ ಇತರರಿದ್ದರು.

# ಸಹಜಾನಂದ ಶ್ರೀಗಳು ನಡೆದಾಡುವ ವಿಶ್ವವಿದ್ಯಾಲಯ

**ಮಹಾಲಿಂಗಪುರ:** ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಶ್ರೀಗಳು ಅಧ್ಯಾತ್ಮ ಕ್ಷೇತ್ರದ ನಡೆದಾಡುವ ವಿಶ್ವವಿದ್ಯಾಲಯ ಇದ್ದಂತೆ. ಅವರ ಸನ್ನಿಧಿಯಲ್ಲಿ ಅಧ್ಯಾತ್ಮ ಸಾಧನೆ ಮಾಡಿದವರೇ ಧನ್ಯರು ಎಂದು ಕೊಪ್ಪಳದ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮೀಜಿ ಹೇಳಿದರು.

ಪಟ್ಟಣದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಇತ್ತೀಚೆಗೆ ನಡೆದ 191ನೇ ಸಿದ್ಧಾರೂಢರ ವಾರದ ಸತ್ಸಂಗ ಕಾರ್ಯಕ್ರಮ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಸಹಜಾನಂದ ಶ್ರೀಗಳು ಕಲಿತದ್ದು



4ನೇ ತರಗತಿಯಾದರೂ ನಾಡಿನ ಶ್ರೇಷ್ಠ ಜ್ಞಾನಿಗಳಲ್ಲಿ ಒಬ್ಬರಾಗಿದ್ದಾರೆ. ಹಿಂದಿಯಿಂದ ಕನ್ನಡಕ್ಕೆ ಅನುವಾದ, ಭಾಮಿನಿ ಷಟ್ಪದಿ ಸೇರಿ 25ಕ್ಕೂ ಅಧಿಕ ಅಮೂಲ್ಯವಾದ ಅಧ್ಯಾತ್ಮ ಗ್ರಂಥಗಳನ್ನು ರಚಿಸಿ, ನಾಡಿನ ಅಧ್ಯಾತ್ಮಪ್ರಿಯರಿಗೆ ಮಹದುಪಕಾರ ಮಾಡಿದ್ದಾರೆ. 83ರ ಇಳಿ ವಯಸ್ಸಿನಲ್ಲಿಯೂ ಬರವಣಿಗೆ, ಭಗವತ್ ಚಿಂತನ ಸಾಧನ ಶಿಬಿರ, ಪ್ರವಚನಗಳ ಮೂಲಕ 45 ವರ್ಷಗಳಿಂದ ಅಧ್ಯಾತ್ಮ ಸಾಧನೆಯಲ್ಲಿರುವುದು ಶ್ಲಾಘನೀಯ ಎಂದರು.

ಪೀಠಾಧಿಪತಿ ಸಹಜಾನಂದ ಸ್ವಾಮೀಜಿ, ಖಜ್ಜಿಡೋಣಿಯ ಕೃಷ್ಣಾನಂದ ಶಾಸೀಜಿ, ಹೊಸೂರ ಪರಮಾನಂದ ಸ್ವಾಮೀಜಿ, ಮಲ್ಲೇಶಪ್ಪ ಕಟಗಿ ಶರಣರು, ಸಿದ್ಧಾನಂದ ಭಾರತಿ ಸ್ವಾಮೀಜಿ ಸಿದ್ಧಾರೂಢರ ಚರಿತ್ರೆಯಾಧರಿಸಿ ಮಾತನಾಡಿದರು.

ಕುಮಾರ ಚಿದಾನಂದ ಚಿಲಮಿ ದಾಸೋಹ ಏರ್ಪಡಿಸಿದ್ದರು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಸಿದ್ಧಾರೂಢ ಟ್ರಸ್ಟ್ ಕಮಿಟಿ ಸದಸ್ಯರಾದ ಡಾ. ಬಿ.ಡಿ. ಸೋರಗಾಂವಿ, ಮಲ್ಲಪ್ಪ ಭಾವಿಕಟ್ಟಿ, ಲಕ್ಕಪ್ಪ ಚಮಕೇರಿ, ಚಂದ್ರಶೇಖರ ಮೋರೆ, ಚೇತನ ಹಾದಿಮನಿ, ಸದ್ಭಕ್ತರಾದ ಎಸ್.ಕೆ. ಗಿಂಡೆ, ಚನ್ನಪ್ಪ ಪಟ್ಟಣಶೆಟ್ಟಿ, ಮಹೇಶ ಇಟಕನ್ನವರ, ಮಹಾಲಿಂಗ ಕರೆಹೊನ್ನ, ಸಿದ್ದರಾಮಯ್ಯ ಗೋಠೆ, ಚನಬಸು ಹುರಕಡ್ಲಿ, ಶೇಖರ ಮರೆಗುದ್ದಿ, ಎಂ. ಗುಡ್ಡಪ್ಪ, ಸಿದ್ದು ದಢೂತಿ, ಮಲ್ಲಪ್ಪ ಯಾದವಾಡ, ಚನ್ನಪ್ಪ ಚಂಡೋಲ, ಚನ್ನಪ್ಪ ಗುಗಾಡ, ಶಿವಾನಂದ ತೇಲಿ, ಕುಮಾರ ಉಳ್ಳಾಗಡ್ಡಿ, ಹಣಮಂತ ಮೀರಾಪಟ್ಟಿ ಇತರರಿದ್ದರು.

# ಜಿಲ್ಲೆಯಲ್ಲಿನ ವಕ್ಫ್ ಆಸ್ತಿ ಖಾತೆ ಬದಲಾವಣೆ-ಫ್ಲ್ಯಾಗಿಂಗ್ ಕಾರ್ಯ 45 ದಿನಗಳಲ್ಲಿ ಪೂರ್ಣಗೊಳಿಸಿ:ಸಚಿವ ಜಮೀರಅಹ್ಮದ ಖಾನ್ ಸೂಚನೆ

**ವಿಜಯಪುರ :** ವಕ್ಫ್ ಆಸ್ತಿ ಖಾತೆ ಬದಲಾವಣೆಯಲ್ಲಿ ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ವಿಜಯಪುರ ಜಿಲ್ಲೆಯ ಪ್ರಗತಿ ಕುಂಠಿತವಾಗಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಮುಂದಿನ ಒಂದು ತಿಂಗಳೊಳಗಾಗಿ ವಕ್ಫ್ ಖಾತೆ ಬದಲಾವಣೆ, ಫ್ಲ್ಯಾಗಿಂಗ್ ಸೇರಿದಂತೆ ಸೂಕ್ತ ಪ್ರಗತಿ ಸಾಧಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವ ಬಿ.ಜೆಡ್.ಜಮೀರಹ್ಮದ ಖಾನ್ ಸೂಚಿಸಿದರು.

ಮಂಗಳವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜರುಗಿದ ವಕ್ಫ್ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಜಿಲ್ಲೆಯಾದ್ಯಂತ ಇರುವ 2148 ಆಸ್ತಿಗಳ ಪೈಕಿ 109 ಆಸ್ತಿಗೆ ಸಂಬಂಧಿಸಿದಂತೆ ಮಾತ್ರ ಖಾತೆ ಬದಲಾವಣೆ ಮಾಡಲಾಗಿದ್ದು, 2039 ಖಾತೆ ಬದಲಾವಣೆ ಬಾಕಿ ಇದೆ. ಶೇ.5.07 ರಷ್ಟು ಮಾತ್ರ ಪ್ರಗತಿ ಸಾಧಿಸಲಾಗಿದೆ. ಬೇರೆ ಜಿಲ್ಲೆಗಳಲ್ಲಿ ಈ ಪ್ರಮಾಣ ಹೆಚ್ಚಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಮಾತ್ರ ಪ್ರಗತಿ ಕುಂಠಿತವಾಗಿದ್ದು, ಜಿಲ್ಲೆಯ 108 ಆಸ್ತಿಗಳ ಫ್ಲ್ಯಾಗಿಂಗ್ ಸಹ ಬಾಕಿ ಉಳಿದಿದ್ದು, ಜಿಲ್ಲೆಯ ವಕ್ಫ್ ಅಧಿಕಾರಿಗಳು ಸಹ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸೂಕ್ತ ಸಮನ್ವಯತೆ ಸಾಧಿಸಿಕೊಂಡು ಖಾತೆ ಬದಲಾವಣೆ ಹಾಗೂ ಫ್ಲ್ಯಾಗಿಂಗ್ ಕಾರ್ಯದ ಅನುಸರಣೆ ಮಾಡಬೇಕು. ಮುಂದಿನ 45 ದಿನಗಳೊಳಗಾಗಿ ಖಾತೆ ಬದಲಾವಣೆ ಹಾಗೂ ಫ್ಲ್ಯಾಗಿಂಗ್ ಕಾರ್ಯ ಪೂರ್ಣಗೊಳಿಸುವಂತೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿವಿಧ ತಾಲೂಕಿನ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ಒಟ್ಟು 109 ಖಾತೆ ಬದಲಾವಣೆಯಾಗಿದ್ದರೂ ಸಹ 108 ಆಸ್ತಿಗಳ ಫ್ಲ್ಯಾಗಿಂಗ್ ಬಾಕಿ ಉಳಿದಿದೆ. ಖಾತೆ ಬದಲಾವಣೆಯಾದ ನಂತರ ಫ್ಲ್ಯಾಗಿಂಗ್ ಮಾಡಲು ಯಾವುದೇ ಸಮಸ್ಯೆ ಇರುವುದಿಲ್ಲ. ಖಾತೆ ಬದಲಾವಣೆ ಸಂದರ್ಭದಲ್ಲಿ ಮಾತ್ರ ಕೆಲವೊಂದು ತೊಂದರೆಗಳು ಬರಬಹುದು. ಖಾತೆ ಬದಲಾವಣೆ ನಂತರವೂ ಫ್ಲ್ಯಾಗಿಂಗ್ ಮಾಡದಿರುವುದು ಅಧಿಕಾರಿಗಳ ನಿರ್ಲಕ್ಷ್ಯತನ ತೋರಿಸುತ್ತಿದೆ. ನಾನು ನಿರ್ಲಕ್ಷ್ಯವನ್ನು ಸಹಿಸುವುದಿಲ್ಲ. ವಕ್ಫ್ ಹಾಗೂ ಮುಜರಾಯಿ ಇಲಾಖೆ ಕಾರ್ಯ ಅತಿ ಪುಣ್ಯದ ಕಾರ್ಯ ಈ ಕಾರ್ಯದಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೇ ಜವಾಬ್ದಾ-ರಿಯುತವಾಗಿ ಕಾರ್ಯ ನಿರ್ವಹಿಸಬೇಕು. ವಕ್ಫ್ ಆಸ್ತಿ ಸಂರಕ್ಷಣೆಯಲ್ಲಿ ಅಧಿಕಾರಿಗಳ ಸಹಕಾರ ಅತ್ಯವಶ್ಯಕವಾಗಿದ್ದು, ಈ ನಿಟ್ಟಿನಲ್ಲಿ ಅಧಿಕಾ-ರಿಗಳು ಕಾರ್ಯೋನ್ಮುಖರಾಗಬೇಕು ಎಂದು ಅವರು ಹೇಳಿದರು.

ಮುಖ್ಯಮಂತ್ರಿಗಳ ಆದೇಶದಂತೆ ನಾನು ರಾಜ್ಯದಾದ್ಯಂತ ಪ್ರವಾಸ ಮಾಡಿ ಅದಾಲತ್‌ಗಳನ್ನು ನಡೆಸುತ್ತಿದ್ದೇನೆ. ಕೇವಲ ನಾಮಕಾವಸ್ತೆ ಆದಾಲತ್‌ಗಳನ್ನು ಮಾಡಲಾಗುತ್ತಿಲ್ಲ. ಅದಾಲತ್‌ನಿಂದ ಜನರಲ್ಲಿ ತಿಳುವಳಿಕೆ- ಜಾಗೃತಿ ಮೂಡುತ್ತಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ದೊರಕಿಸುವ ಉದ್ದೇಶದಿಂದ ಅದಾಲತ್‌ಗಳನ್ನು ನಡೆಸಲಾಗುತ್ತಿದೆ. ಸರ್ಕಾರದ ಮೇಲೆ ಜನರು ನಿರೀಕ್ಷೆಯನ್ನು ಇಟ್ಟುಕೊಂಡಿರುತ್ತಾರೆ. ಜನರು ನಿರೀಕ್ಷೆ ಮಾಡುವುದು ಕೇವಲ ರಸ್ತೆ, ನೀರು, ವಿದ್ಯುತ್ ಇದನ್ನು ಸಹ ಒದಗಿಸಲು ಸಾಧ್ಯವಾಗಲಿಲ್ಲವೆಂದರೆ ಹೇಗೆ ಎಂದು ಪ್ರಶ್ನಿಸಿದ ಅವರು, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ ಪರಿಹಾರ ಒದಗಿಸಲು ಕ್ರಮ ವಹಿಸುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಸೋಮವಾರ ವಿಜಯಪುರದಲ್ಲಿ ನಡೆದ ವಕ್ಫ್ ಅದಾಲತ್‌ನಲ್ಲಿ ವಕ್ಫ್ ಆಸ್ತಿಗಳ ಅತಿಕ್ರಮಣದ 17 ಅರ್ಜಿಗಳು, ಖಬರಸ್ಥಾನ (ಸ್ಮಶಾನ)ಕ್ಕೆ ಸಂಬಂಧಿಸಿದ್ದು, ಖಾತೆ ಬದಲಾವಣೆಯ 81 ಅರ್ಜಿಗಳು, ಸರ್ವೇ ಕಾರ್ಯಕ್ಕಾಗಿ 25 ಅರ್ಜಿಗಳು ಸೇರಿದಂತೆ ಒಟ್ಟು 330 ಅರ್ಜಿಗಳು ಸಲ್ಲಿಕೆಯಾಗಿವೆ. ಈ ಪೈಕಿ 83 ಅರ್ಜಿಗಳು ಖಬರಸ್ತಾನ (ಸ್ಮಶಾನ) ಜಾಗ ಕುರಿತು ಅರ್ಜಿಗಳು ಬಂದಿದ್ದು, ವಿವಿಧ ತಾಲೂಕುಗಳಲ್ಲಿ ಅವಶ್ಯಕವಿರುವ ಸ್ಮಶಾನ ಜಮೀನಿಗೆ ಸಂಬಂಧಿಸಿದಂತೆ ಸೂಕ್ತ ಪರಿಶೀಲನೆ ನಡೆಸಿ, ಸರ್ಕಾರಿ ಜಾಗ ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನು ಖರೀದಿ ಮಾಡಿ, ಸ್ಮಶಾನಕ್ಕೆ ಜಮೀನು ಒದಗಿಸುವಂತೆ ಸೂಚಿಸಿದ ಅವರು, ಖಾಸಗಿ ಜಮೀನು ಖರೀದಿಯಲ್ಲಿ ಅನುದಾನದ ಸಮಸ್ಯೆಗಳು ಬಂದಲ್ಲಿ ನನ್ನ ಗಮನಕ್ಕೆ ತರುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ ಅವರು, ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಸೂಕ್ತ ಪರಿಹಾರ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದು ಅವರು ಹೇಳಿದರು.

ಇಂದಿನ ಸಭೆಗೆ ಗೈರ ಹಾಜರಾಗಿರುವ ಸಿಂದಗಿ ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಮಾನತ್ತುಗೊಳಿಸುವಂತೆ ಸೂಚಿಸಿದ ಅವರು, ವಿವಿಧ ಸಚಿವರು, ಶಾಸಕರ ಸಭೆ, ಕೆಡಿಪಿ ಸಭೆಗಳಿಗೆ ಗೈರ ಹಾಜರಾಗುವ ಅಧಿಕಾರಿಗಳ ಮೇಲೆ ಯಾವುದೇ ಮುಲಾಜಿಲ್ಲದೇ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಅವರು ಸೂಚಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಖಾತೆ ಸಚಿವ ಶಿವಾನಂದ ಪಾಟೀಲ ಅವರು ಮಾತನಾಡಿ, ಬಸವನಬಾಗೇವಾಡಿ ಮತಕ್ಷೇತ್ರದ ಹುಣಶ್ಯಾಳ-ದೇವರಗೆಣ್ಣೂರ ಗ್ರಾಮದ ಸ್ಮಶಾನ ಜಾಗೆ ಕುರಿತು ಪ್ರಸ್ತಾಪಿಸಿದಾಗ, ಅಧಿಕಾರಿಗಳು, ಈ ಗ್ರಾಮದ ಸ್ಮಶಾನ ಜಾಗದ ಕುರಿತು ನಿನ್ನೆಯೇ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂಬ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ವಕ್ಫ್ ಖಾತೆ ಸಚಿವರು ಬರುತ್ತಿದ್ದಾರೆ ಎಂದು ಪ್ರಸ್ತಾವನೆ ಸಲ್ಲಿಸುವುದು ಸಮಂಜಸವಲ್ಲ ಎಂದ ಅವರು, ಕೂಡಲೇ ಸ್ಮಶಾನ ಜಾಗ ಒದಗಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಅವರು ಸೂಚಿಸಿದರು.

ವಿಜಯಪುರ ತಾಲೂಕಿನಲ್ಲಿರುವ 356 ವಕ್ಫ್ ಆಸ್ತಿಗಳ ಪೈಕಿ 17 ಆಸ್ತಿಗಳಿಗೆ ಸಂಬಂಧಿಸಿದ ಖಾತೆ ಬದಲಾವಣೆ ಮಾಡಲಾಗಿದೆ, 339 ಬಾಕಿ ಉಳಿದಿವೆ. ಅದರಂತೆ ಬಬಲೇಶ್ವರ ತಾಲೂಕಿನ 142 ಆಸ್ತಿಗಳ ಪೈಕಿ 8 ಖಾತೆಗಳ ಬದಲಾವಣೆಯಾಗಿದೆ, 134 ಬಾಕಿ ಉಳಿದಿವೆ. ತಿಕೋಟಾ ತಾಲೂಕಿನ 299 ಆಸ್ತಿಗಳ ಪೈಕಿ 5 ಖಾತೆಗಳ ಬದಲಾವಣೆಯಾಗಿದೆ, 294 ಬಾಕಿ ಉಳಿದಿವೆ. ಬಸವನಬಾಗೇವಾಡಿ ತಾಲೂಕಿನ 133 ಆಸ್ತಿಗಳ ಪೈಕಿ 15 ಬದಲಾವಣೆಯಾಗಿದ್ದು, 118 ಬಾಕಿ ಇವೆ. ನಿಡಗುಂದಿ ತಾಲೂಕಿನ 43 ಆಸ್ತಿಗಳ ಪೈಕಿ 7 ಖಾತೆ ಬದಲಾವಣೆಯಾಗಿದ್ದು, 36 ಬಾಕಿ ಇವೆ. ಕೊಲ್ಹಾರ ತಾಲೂಕಿನ 69 ಆಸ್ತಿಗಳ ಪೈಕಿ 3 ಖಾತೆಗಳ ಬದಲಾವಣೆಯಾಗಿದ್ದು, 66 ಬಾಕಿ ಇವೆ. ಮುದ್ದೇಬಿಹಾಳ ತಾಲೂಕಿನ 79 ಆಸ್ತಿಗಳ ಪೈಕಿ 8 ಖಾತೆ ಬದಲಾವಣೆಯಾಗಿದ್ದು, 71 ಬಾಕಿ ಇವೆ. ತಾಳಿಕೋಟೆ ತಾಲೂಕಿನ 144 ಆಸ್ತಿಗಳ ಪೈಕಿ 17 ಖಾತೆ ಬದಲಾವಣೆಯಾಗಿದ್ದು, 127 ಬಾಕಿ ಇವೆ. ದೇವರಹಿಪ್ಪರಗಿ ತಾಲೂಕಿನ 111 ಆಸ್ತಿಗಳ ಪೈಕಿ ಈವರೆಗೆ ಯಾವುದೇ ಖಾತೆ ಬದಲಾವಣೆಯಾಗಿರುವುದಿಲ್ಲ. ಸಿಂದಗಿ ತಾಲೂಕಿನ 144 ಆಸ್ತಿಗಳ ಪೈಕಿ ಕೇವಲ 1 ಖಾತೆ ಬದಲಾವಣೆಯಾಗಿದ್ದು, 143 ಬಾಕಿ ಉಳಿದಿವೆ. ಆಲಮೇಲ ತಾಲೂಕಿನ 40 ಆಸ್ತಿಗಳ ಪೈಕಿ 7 ಖಾತೆ ಬದಲಾವಣೆಯಾಗಿದ್ದು, 33 ಬಾಕಿ ಇವೆ. ಇಂಡಿ ತಾಲೂಕಿನ 513 ಆಸ್ತಿಗಳ ಪೈಕಿ 15 ಖಾತೆ ಬದಲಾವಣೆಯಾಗಿದ್ದು, 498 ಬಾಕಿ ಇವೆ. ಚಡಚಣ ತಾಲೂಕಿನ 75 ವಕ್ಫ್ ಆಸ್ತಿಗಳ ಪೈಕಿ 6 ಆಸ್ತಿಗೆ ಸಂಬಂಧಿಸಿದ ಖಾತೆ ಬದಲಾವಣೆ ಮಾಡಲಾಗಿದ್ದು, 69 ಆಸ್ತಿಗಳ ಖಾತೆ ಬದಲಾವಣೆ ಬಾಕಿ ಇವೆ ಎಂದು ಸಭೆಗೆ ಮಾಹಿತಿ ಒದಗಿಸಲಾಯಿತು.

ಸಭೆಯಲ್ಲಿ ನಾಗಠಾಣ ಶಾಸಕ ವಿಠಲ ಕಟಕದೊಂಡ, ವಿಧಾನಪರಿಷತ್ ಸದಸ್ಯ ಅಬ್ದುಲ ಜಬ್ಬಾರ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನ್ವರಬಾಶಾ, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಕೊಟ್ಟೂರು ಪಟ್ಟಣ ಪಂಚಾಯಿತಿಯ ದಿನನಿತ್ಯ ಓಡಾಡುವ ಸರಕಾರಿ ಕಛೇರಿಯ ವಾಹನಗಳಿಗೆ ಇಲ್ಲ ಇನ್ಸೂರೆನ್ಸ್* ಅಮಾಯಕ ನೌಕರರ ಜೀವದ ಜೊತೆ ಚೆಲ್ಲಾಟ..! ಪಟ್ಟಣ ಪಂಚಾಯತಿ ಅಧಿಕಾರಿಗಳಿಂದ ನಿಯಮ ಉಲ್ಲಂಘನೆ । ಸರಕಾರಿ ಕಛೇರಿಯ ಹಲವು ವಾಹನಗಳಿಗಿಲ್ಲ ಇನ್ಸೂರೆನ್ಸ್ ಮೇಲಾಧಿಕಾರಿಗಳ ಮೌನ? ಸಾರ್ವಜನಿಕರ ಆಕ್ರೋಶ

● ವಾರ್ತಾಲೋಕ ವಾರ್ತೆ

**ಕೊಟ್ಟೂರು: ಅ14.** ಕೊಟ್ಟೂರು ಪಟ್ಟಣ ಪಂಚಾಯತಿಯ ದಿನ ನಿತ್ಯ ಉಪಯೋಗಿಸೋ ಎಷ್ಟೋ ವಾಹನಗಳಿಗಿಲ್ಲ ಇನ್ಸೂರೆನ್ಸ್, ಕಳೆದ ವರ್ಷಗಳಲ್ಲೇ ಇನ್ಸೂರೆನ್ಸ್ ಮುಗಿದರು ಸಹ ಇನ್ನೂ ವಿಮೆ ನವೀಕರಣ ಮಾಡದೇ ಅಮಾಯಕ ನೌಕರರ ಜೀವದ ಜೊತೆ ಚಲ್ಲಟವಾಡುತ್ತಿರುವ ಪಟ್ಟಣ ಪಂಚಾಯಿತಿ ಅಧಿಕಾರಿಗಳು. ಪಟ್ಟಣ ಪಂಚಾಯತಿಯಲ್ಲಿ ನಿರುಪಯೋಕ್ತವಾಗಿರುವ ವಾಹನಗಳಿಗೆ ಇನ್ಸೋರೆನ್ಸ್ ಅವಶ್ಯಕತೆ ಇಲ್ಲ ಆದರೂ ಇಂತಹ ವಾಹನಗಳಿಗೆ ಇನ್ಸೋರೆನ್ಸ್ ಮಾಡಿಸಿದ್ದಾರೆ ಎಂಬ ಬಿಸಿ–ಬಿಸಿ ಚರ್ಚೆ ಇದೀಗ ಪಟ್ಟಣದಲ್ಲಿ ಚರ್ಚೆಯಾಗುತ್ತಿದೆ. ಇದಕ್ಕೆ ಅಧಿಕಾರಿಗಳೆ ಉತ್ತರ



ಕೊಡಬೇಕಿದೆ.

ನಾವು ದಿನನಿತ್ಯ ಓಡಾಡುವ ವಾಹನಗಳಿಗೆ ಇನ್ಸೂರೆನ್ಸ್, ಸರಿಯಾದ ದಾಖಲೆಗಳು ಇಲ್ಲ ಕಾನೂನು ಉಲ್ಲಂಘನೆಯಾಗಿದೆ ಎಂದು ಜನ ಸಾಮಾನ್ಯನಿಗೆ ದಂಡದ ರೂಪದಲ್ಲಿ ಕೋಟ್ಯಂತರ ಹಣ ವಸೂಲಿ ಮಾಡ್ತಾರೆ. ಆದರೆ ಕಾನೂನು ಪಾಲಿಸುವ ಸರ್ಕಾರಿ ಇಲಾಖೆ ಅಧಿಕಾರಿಗಳಿಂದಲೆ ಕಾನೂನು ಉಲ್ಲಂಘನೆಯಾಗ್ತಿದೆ. ಭಾಗದಷ್ಟು



ಹೊರ ಬೀಳುತ್ತದೆ ಭ್ರಷ್ಟಾಚಾರ ಹಾಗೂ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷೆ ಜನರಿಗೊಂದು ನ್ಯಾಯ ಅಧಿಕಾರಿಗಳಿಗೊಂದು ನ್ಯಾಯ ಎನ್ನುವಂತಾಗಿದೆ. ಪಟ್ಟಣ ಪಂಚಾಯತಿ ಕಛೇರಿಯ ಸಾರ್ವಜನಿಕರಿಗೆ, ಪಟ್ಟಣದ ಸ್ವಚ್ಛತೆ ಇತರೇ ಕಾರ್ಯಗಳಿಗೆ ಉಪಯೋಗಿಸುವ ಅನೇಕ ಸರ್ಕಾರಿ ವಾಹನಗಳು ವಿಮೆರಹಿತವಾಗಿವೆ. ಇಲ್ಲಿನ ಅನೇಕ ವಾಹನಗಳಿಗೆ ಕಳೆದ ವರ್ಷದ ಹಿಂದೆಯೇ ವಾಹನ ವಿಮೆ ಮುಗಿದಿದೆ.

ಒಟ್ಟಿನಲ್ಲಿ ಸರ್ಕಾರಿ ವಾಹನಗಳಿಗೆ ಇನ್ಸುರೆನ್ಸ್ ತುಂಬುವ ಮೂಲಕ ಜವಾಬ್ದಾರಿ ಮೆರೆಯಬೇಕಾಗಿದ್ದ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದ್ದು. ಸಾರ್ವಜನಿಕರು ಕೂಡ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕುವಂತಾಗಿದೆ. ಇನ್ನಾದ್ರೂ ಅಧಿಕಾರಿಗಳು ಎಚ್ಚೆತ್ತುಕೊಂಡು ಸರ್ಕಾರಿ ಎಲ್ಲಾ ವಾಹನಗಳಿಗೆ ವಿಮೆ ಮಾಡಿಸುವ ಮೂಲಕ ಕಾನೂನು ಪಾಲಿಸುತ್ತಾರೋ ಇಲ್ಲವೋ ಅನ್ನುವುದನ್ನು ಕಾದು ನೋಡಬೇಕಾಗಿದೆ.ಎಂದು ಕಿರಣ್ ಕುಮಾರ್, ಮಂಜುನಾಥ್, ಅಂಜಿನಿ, ಚಂದ್ರಶೇಖರ್ ಪತ್ರಿಕೆಗೆ ಮಾಹಿತಿ ತಿಳಿಸಿದ್ದಾರೆ.

ವರದಿ ಪರಶುರಾಮ್.

# ನವರಾತ್ರಿ ಹಬ್ಬದಲ್ಲಿ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಶಿವಾಚಾರ್ಯ ಸ್ವಾಮೀಜಿಗಳಿಂದ ಆಶೀರ್ವಚನ

● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ14.** ನಮ್ಮ ನೆಲದ ಹಬ್ಬಗಳು ಭಾರತೀಯ ಸಂಸ್ಕೃತಿಯ ಗರಿಮೆಯನ್ನು ಇಡೀ ವಿಶ್ವಕ್ಕೆ ಪರಿಚಯಿಸುತ್ತಿವೆ ಎಂದು ಶ್ರೀಮದ್ ಉಜ್ಜಿನಿ ಸದ್ಧರ್ಮ ಸಿಂಹಾಸನಧೀಶ್ವರ 1008 ಜಗದ್ಗುರು ಸಿದ್ಧಲಿಂಗ ರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ತಿಳಿಸಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಶುಕ್ರವಾರ ಶರನ್ನವರಾತ್ರಿ ಅಂಗವಾಗಿ ಜರುಗಿದ ದೇವಿ ಪುರಾಣ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ಆರ್ಶಿವಚನ ನೀಡಿ ಮಾತನಾಡಿದರು. ನಮ್ಮ ಪೂರ್ವಿಕರು ಆಚರಣೆ ಮಾಡಿಕೊಂಡು ಬಂದ ಪ್ರತಿ ಹಬ್ಬಗಳಿಗೂ ಒಂದು ವಿಶಿಷ್ಟತೆ ಇದೆ. ನವರಾತ್ರಿ ಹಬ್ಬವು ಶಕ್ತಿ ಪೀಠದ ಸಂಕೇತ. ಭಾರತದ ಸಂಸ್ಕೃತಿಯಲ್ಲಿ ದೇವೀ ಉಪಾಸನೆಯನ್ನು ಇವತ್ತಿಗೂ ಉಳಿಸಿಕೊಳ್ಳಲಾಗಿದೆ. ನಮ್ಮ ಅಗತ್ಯಗಳಿಗೆ ಅನುಗುಣವಾಗಿ ನಮ್ಮದೇ ದೇವತಾ ಸ್ವರೂಪಗಳನ್ನು ಸೃಷ್ಟಿಸುವಂತಹ ಸ್ವಾತಂತ್ರ್ಯವನ್ನು ಈ ಸಂಸ್ಕೃತಿ ನಮಗೆ ನೀಡಿದೆ. ನವರಾತ್ರಿಯ ನೆಪದಲ್ಲಿ ಮನುಷ್ಯನಲ್ಲಿನ ಅಹಂಕಾರ, ಆಸೆ, ಲಾಲಸೆ ಎಂಬ ಅರಿಷಡ್ ವರ್ಗಗಳನ್ನು ನಿಗ್ರಹಿಸಿ ಅವುಗಳನ್ನು ಗೆಲ್ಲಬೇಕು ಎನ್ನುವು ಸಾರವಾಗಿದೆ. ಆದ್ದರಿಂದ ಪುರಾಣ ಪ್ರವಚನ ಆಲಿಸುವ ಮೂಲಕ ಸನ್ಮಾರ್ಗಿಗಳಾಗಿ ಬಾಳಬೇಕು. ಪ್ರಸ್ತುತ ಜಗತ್ತು ಅಂಧಕಾರದಲ್ಲಿ



ಮುಳುಗಿದೆ ವಿಲಾಸಿ ಜೀವನಕ್ಕೆ ಮೊರೆ ಹೋಗಿ ಈ ನೆಲದ ಸಂಸ್ಕೃತಿಯನ್ನು ಹಾಳು ಮಾಡುತ್ತಿವೆ. ಆದ್ದರಿಂದ ಸನಾತನ ಧರ್ಮದ ತಳಹದಿಯಲ್ಲಿ ಪೂಜೆ, ಪುರಾಣ, ಪ್ರವಚನಗಳಿಗೆ ಆದ್ಯತೆ ನೀಡಿ ಈ ನೆಲದ ಮಣ್ಣನ್ನು ಗೌರವಿಸುವ ಜತೆ ನಮ್ಮ ಸಂಸ್ಕೃತಿಯನ್ನು ಮೆರಸಬೇಕಿದೆ ಎಂದರು. ಈ ನೆಲದಲ್ಲಿ

ಹೆಣ್ಣಿಗೆ ವಿಶೇಷವಾದ ಗೌರವಗಳನ್ನು ನೀಡಿ, ಅವಳಿಗೆ ಪೂಜ್ಯನೀಯ ಸ್ಥಾನವನ್ನು ನೀಡಿದೆ. ಯಾವುದೇ ರಾಷ್ಟ್ರ ಮಹಿಳೆಯರನ್ನು ಸಮಾನಾಗಿ ನೋಡದ ಹೊರತು ಆ ರಾಷ್ಟ್ರದ ಅಭಿವೃದ್ಧಿ ಅಸಾಧ್ಯ. ಮಹಿಳೆಯರನ್ನು ಗೌರವಿಸುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಇದೇ ಸಂಧರ್ಭದಲ್ಲಿ ವೇ.ಮೂ. ರವೀಂದ್ರನಾಥ ಅವರಿಂದ ಪುರಾಣ ಪ್ರವಚನ ನಡೆಯಿತು. ನಂತರ ಪಟ್ಟಣದ ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮ ನಡೆಯಿತು.

ಡೋಣುರು ಚಾನುಕೋಟಿ ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಜೀ, ಹರಪನಹಳ್ಳಿ ತೆಗ್ಗಿನಮಠದ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಜೀ, ಕೂಡ್ಲಿಗಿ ಹಿರೇಮಠದ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮಿಜೀ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಎಸ್.ವಿ.ಸಿದ್ದರಾಧ್ಯ, ನಿಕಟ ಪೂರ್ವ ಅಧ್ಯಕ್ಷ ಕೆ.ಎಸ್.ವೀರೇಶ್,ಕೆ.ಎಚ್.ಎಂ.ಕೊಟ್ರಯ್ಯ, ನಾಗಯ್ಯ, ಶ್ರೀ ಗಂಗಾ ಜುಯ್ಯೂಲೆರ್ಸ್ ಮಾಲೀಕ ಗಂಗಾಧರ, ಪಪಂ ಮಾಜಿ ಅಧ್ಯಕ್ಷ ಪಿ.ರಜನಿಕಾಂತ್, ಉಪನ್ಯಾಸಕ ಸುರೇಶ್ ಮುದ್ದೇಬಿಹಾಳ ಸೇರಿದಂತೆ ಅನೇಕರು ಇದ್ದರು.

**ವರದಿ ಎಚ್ ವೀರಣ್ಣ.**

# ವಿಜಯದಶಮಿ ಹಬ್ಬದಲ್ಲಿ ಬಸವ ಬುದ್ಧ ಅಂಬೇಡ್ಕರ ಫೋಟೋ ಇಟ್ಟು ಪೂಜೆ ಸಲ್ಲಿಸಿದ ಕಮಿನಿಸ್ಟ್ ಪಕ್ಷದ ಕಾರ್ಯದರ್ಶಿ ಕರಿಯಪ್ಪ

● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ14.** ಮರಬ ಗ್ರಾಮ ಪಂಚಾಯತಿಯ ಹಾಲಿ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ಮರಬನಹಳ್ಳಿ ಗ್ರಾಮ ಪಂಚಾಯತಿ ಸದಸ್ಯರಾದ ಭಾರತ ಕಮ್ಯುನಿಸ್ಟ್ ಪಕ್ಷದ ಕೂಡ್ಲಿಗಿತಾಲೂಕು ಕಾರ್ಯ ದರ್ಶಿಗಳಾದ ಕರಿಯಪ್ಪನವರು ಪದವಿ ಮುಗಿಸಿ ನರಸಿಂಗ್ ತರಬೇತಿ ಮುಗಿಸಿ ಕಾರ್ಲ್ ಮಾರ್ಕ್ಸ್ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಸಮ ಸಮಾಜವನ್ನು ಸಮಾಜವಾದದತ್ತ ಮುನ್ನಡೆಯುವ ನಿಟ್ಟಿನಲ್ಲಿ ಬದುಕಿಗಾಗಿ ತಾಸಿಲ್ದಾರ್ ಕಚೇರಿ ಮುಂದೆ ಪತ್ರ ಬರೆದು ಜನರು ತಿಳಿದಷ್ಟು ನೀಡುವ ಹಣದಲ್ಲಿ ಹೆಂಡತಿ ಮತ್ತು ಇಬ್ಬರ ಮಕ್ಕಳ ಜೊತೆ ಜೀವನ ಮಾಡುತ್ತಿದ್ದು ಇಂದು ವಿಜಯದಶಮಿ ಹಬ್ಬದಂದು



ತನ್ನ ಮನೆಯಲ್ಲಿ ಬಸವ ಮತ್ತು ಬುದ್ಧ ಅಂಬೇಡ್ಕರರ ಇರುವ ಫೋಟೋವನ್ನು ಇಟ್ಟು ಇವರೇ ನಮ್ಮ ಆರಾಧ್ಯ ದೇವರುಗಳೆಂದು ವಿಜಯದಶಮಿಯ ಬನ್ನಿ ಹಬ್ಬವನ್ನು ಆಚರಿಸಿದ್ದಾರೆ ತನ್ನ ಮಗ ಮತ್ತು ಮಗಳ ಹೆಂಡತಿಯ ಜೊತೆಯಲ್ಲಿ ಫೋಟೋದ ಮುಂದೆ ವಿಜಯದಶಮಿ ಆಚರಿಸಿ ಅವರ ಆದರ್ಶಗಳು ನಮಗೆಲ್ಲ ಈ ದಿನಮಾನಗಳಲ್ಲಿ ನಮ್ಮಂತ ಸಾವಿರಾರು ಯುವಕರಗಳಿಗೆ ಸ್ಫೂರ್ತಿದಾಯಕವಾಗಲಿ ಮುಂದಿನ ಪೀಳಿಗೆಗೂ ಅವರ ಆದರ್ಶ ಪ್ರತಿಯೊಬ್ಬ ಮನುಷ್ಯರಿಗೂ ಆದರ್ಶಗಳಾಗಿ ಪ್ರತಿಯೊಬ್ಬರನ್ನು ಬದಲಾಯಿಸಲಿ ಸಮ ಸಮಾಜದ ನಿರ್ಮಾಣದ ಕಡೆ ಮೇಲು. ಕೀಳಿಇರುಮೆ ಎನ್ನದೆ ಜಾತಿ ಧರ್ಮವಿಲ್ಲದೆ ನನ್ನದು ನಾನು ಎಂಬ ಅಹಂಕಾರವನ್ನು ಬಿಟ್ಟು ಪ್ರತಿಯೊಬ್ಬರನ್ನು ಸಮಾನತೆಯ ಇಂದನೋಡುತ್ತಾ ಸಮ ಬಾಳ್ವೆಯೊಂದಿಗೆ ಸಮ ಸಮಾಜ ನಿರ್ಮಾಣ ಮಾಡೋಣ ಎಂಬ ಕನಸಿನೊಂದಿಗೆ ವಿಜಯದಶಮಿ ಆಚರಿಸಿದ್ದಾರೆ ಇದು ಸಮಾಜಕ್ಕೆ ಮಾದರಿಯಾಗಲಿ ಸಮಾಜದ ಯುವ ಪೀಳಿಗೆಗೆ ಪ್ರಜ್ಞಾವಂತ ನಾಗರಿಕರಿಗೆ ಬಸವ ಬುದ್ಧ ಅಂಬೇಡ್ಕರರ ವಾದವನ್ನು ವಿರೋಧಿಸುವ ಸಮುದಾಯಕ್ಕೆ ಜಾಗೃತಿಯ ಸಂದೇಶವಾಗಲಿ ಕಾಮ್ರೆಡ್ ಕರಿಯಪ್ಪನವರಿಗೆ ಲಾಲ್ ಸಲಾಂ ಲಾಲ್ ಸಲಾಂ.

ವರದಿ ಎಚ್ ವೀರಣ್ಣ.

# ಕಾನೂನು ಬಾಹಿರ ವಕ್ಫ್ ಸ್ವತ್ತು ರದ್ದುಪಡಿಸಿ: ವಿಶ್ವ ಹಿಂದು ಪರಿಷತ್ ಒತ್ತಾಯ

**ವಿಜಯಪುರ, ;** ವಿಜಯಪುರ ಜಿಲ್ಲೆ ಒಂದು ಐಸಿಹಾಸಿಕ ವಿಶ್ವವಿಖ್ಯಾತ ಸ್ಮಾರಕಗಳ ಪ್ರವಾಸಿಗರ ಜನಪ್ರಿಯ ಪ್ರೇಕ್ಷಣಿಯ ನಗರವಾಗಿದೆ. ಈ ನಗರದಲ್ಲಿ ಭಾರತೀಯ ಪುರಾತತ್ವ ಇಲಾಖೆಗೆ, ಮಹಾನಗರ ಪಾಲಿಕೆ ಹಾಗೂ ಕಂದಾಯ ಇಲಾಖೆಗೆ ಸೇರಿರುವ ಆಸ್ತಿಗಳನ್ನು ಕಂದಾಯ ದಾಖಲೆಗಳಲ್ಲಿ ಕಾನೂನು ಬಾಹಿರವಾಗಿ ವಕ್ಫ್ ಸೊತ್ತು ಎಂದು ದಾಖಲಿಸಿದ್ದನ್ನು ತಕ್ಷಣ ತೆರವುಗೊಳಿಸಲು ವಿಜಯಪುರ ವಿಶ್ವ ಹಿಂದೂ ಪರಿಷತ್ ವಿಜಯಪುರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.

ಇದೀಗ ಜಿಲ್ಲಾಡಳಿತ ತಯಾರಿಸಿದ ಯಾದಿ ಪ್ರಕಾರ ವಿಜಯಪುರ ಜಿಲ್ಲೆಯಾದ್ಯಂತ ಮಹಾನಗರ ಪಾಲಿಕೆ, ಭಾರತೀಯ ಪುರಾತತ್ವ, ಕಂದಾಯ ಇಲಖೆಗೆ ಒಳಪಟ್ಟ ಸುಮಾರು 357 ಜಮೀನುಗಳು ವಕ್ಸ್ ಹೆಸರಿನಲ್ಲಿ ದಾಖಲು ಮಾಡುವ ಹುನ್ನಾರ ನಡೆದಿರುವುದು ಕಂಡು ಬಂದಿದೆ. ಇಂತಹ ಕಂದಾಯಿಕ ಬದಲಾವಣೆ ಮಾಡಬೇಕಾದರೆ, ನಿಯಮಾನುಸಾರ ಮಾಡಬೇಕಾಗುತ್ತದೆ. ಇತ್ತೀಚಿನ ಕರ್ನಾಟಕ ಉಚ್ಚ ನ್ಯಾಯಾಲಯವು ಸಹ ಐತಿಹಾಸಿಕ ತೀರ್ಪು ನೀಡಿದೆ. ಈ ತೀರ್ಪಿನ ಪ್ರಕಾರ ಕಂದಾಯ ದಾಖಲೆಗಳಲ್ಲಿ ಬದಲಾವಣೆ ಮಾಡಬೇಕಾದರೆ ಆಸ್ತಿಗೆ ಸಂಬಂಧಪಟ್ಟವರ ಹಾಗೂ ಸ್ಥಾನಿಕ ವಿಚಾರಣೆ ಮಾಡದೇ ಮಾಡುವುದು ಕಾನೂನು ಬದ್ಧವಲ್ಲವೆಂದು ಹೇಳಿದೆ. ಹೀಗಾಗಿ ಕಂದಾಯ ದಾಖಲೆಗಳಲ್ಲಿ ಕಾನೂನು ಬಾಹಿರವಾಗಿ ವಕ್ಸ್ ಸೊತ್ತು ಎಂದು ದಾಖಲಿಸುವುದನ್ನು ಕೈಬಿಡಬೇಕು ಎಂದು ಹೇಳಿದ್ದಾರೆ.

ಅಪರೂಪದ ಸ್ಮಾರಕಗಳ ಯೋಗ್ಯ ರಕ್ಷಣೆಗಾಗಿ 1914 ರಲ್ಲಿ ವಿಜಯಪುರದ 100ಕ್ಕೂ ಹೆಚ್ಚು ಸ್ಮಾರಕಗಳನ್ನು "ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಕಾನೂನು 1904" ಅಡಿಯಲ್ಲಿ ರಕ್ಷಿತ ಸ್ಮಾರಕಗಳೆಂದು ಘೋಷಿತವಾಗಿದ್ದವು. ಅವುಗಳತ್ತ ನಿರ್ಲಕ್ಷ ಮಾಡಿದ್ದರಿಂದ ಅನೇಕ ಸ್ಮಾರಕಗಳ ಕಳೆ ಕಳೆದುಕೊಂಡಿವೆ. ಕೆಲವೊಂದು ಧನದಾಹಿಗಳು ಸಂರಕ್ಷಿತ ಸ್ಮಾರಕಗಳ ಅತಿಕ್ರಮಣ ತಮ್ಮ ಸ್ವಾರ್ಥಕ್ಕಾಗಿ, ಹಣದಾಸೆಗಾಗಿ ಅಂಗಡಿ ಮುಗ್ಗಟ್ಟು ಕಟ್ಟಿ ಹಣ ಗಳಿಸುತ್ತಿದ್ದಾರೆ. ಸ್ಮಾರಕಗಳು ಹಾಳಾಗುವುದರಲ್ಲಿ ಇದೇ ಸ್ಥಿತಿ ಮುಂದುವರೆದರೆ ಸ್ಮಾರಕಗಳು ಅವಸಾನಗೊಳ್ಳುತ್ತವೆ. ಜಿಲ್ಲಾಧಿಕಾ–ರಿಗಳು ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸರ್ಕಾರದ ಆಸ್ತಿಗಳನ್ನು ಕಾನೂನುಬಾಹಿರವಾಗಿ ವಕ್ಸ್ ಬೋರ್ಡಗೆ ದಾಖಲು ಮಾಡಿರುವುದನ್ನು ತೆರವುಗೊಳಿಸಲು ಹಾಗೂ ಇನ್ನೂ ಮಾಡಲು ಉದ್ದೇಶವಿದ್ದರೆ ತಕ್ಷಣ ಕೈಬಿಡಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

# ಮಾಜಿ ಶಾಸಕ ||ದಿ||ಎನ್ ಟಿ ಬೊಮ್ಮಣ್ಣ ನವರ ಎರಡನೇ ವರ್ಷದ ಪುಣ್ಯತಿಥಿ. ಹಾಲಿ ಶಾಸಕ ಎನ್ ಟಿ ಶ್ರೀನಿವಾಸ್ ರವರಿಂದ





● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಅ14.** ಕೂಡ್ಲಿಗಿ ತಾಲೂಕಿನ ಜನಪ್ರಿಯ ನಾಯಕ ದೊರೆ, ಏಳೂರುಗುಡ್ಡದ ಹುಲಿ,ಖ್ಯಾತ ರಾಜಕಾರಣಿ ದಿವಂಗತ ಎನ್.ಟಿ.ಬೊಮ್ಮಣ್ಣ ಅವರ ಎರಡನೇ ವರ್ಷದ ಪುಣ್ಯತಿಥಿಯ ಅಂಗವಾಗಿ ನರಸಿಂಹನಗಿರಿ ಗ್ರಾಮದ ಅವರ ತೋಟದಲ್ಲಿ ಕುಟುಂಬಸ್ಥರು, ಸ್ನೇಹಿತರು, ಅಭಿಮಾನಿಗಳು ಅವರ ಸಮಾಧಿ ಬಳಿ ತೆರಳಿ ಪೂಜೆ ಸಲ್ಲಿಸಿ ಸ್ಮರಿಸಿಕೊಂಡರು.

ಅವರ ಪತ್ನಿ ಓಬಮ್ಮ,ಪುತ್ರರಾದ ಕೂಡ್ಲಿಗಿ ಶಾಸಕರಾದ ಡಾ.ಎನ್.ಟಿ.ಶ್ರೀನಿವಾಸ್, ಹಾಗೂ ಸಮಾಜ ಸೇವಕರಾದ ಎನ್.ಟಿ.ತಮ್ಮಣ್ಣ, ಹಾಗೂ ಪುತ್ರಿಯರು, ಸೋಸೆಯಂದಿರು,ಮೊಮ್ಮಕ್ಕಳು, ಸಂಬಂಧಿಗಳು, ಕ್ಷೇತ್ರದ ಮುಖಂಡರು, ಎಲ್ಲಾರು ಸೇರಿ ಅವರ ತೋಟದಲ್ಲಿ ಇರುವ ಸಮಾಧಿ ಬಳಿ ತೆರಳಿ ಮಾಜಿ ಶಾಸಕರಾದ ದಿವಂಗತ ಎನ್.ಟಿ.ಬೊಮ್ಮಣ್ಣ ಅವರಿಗೆ ಇಷ್ಟವಾದ ತಿಂಡಿ–ತಿನಿಸುಗಳನ್ನಿಟ್ಟು ಭಕ್ತಿಯಿಂದ ಪೂಜಿಸಿದರು.

ತಂದೆಯವರನ್ನು ಸ್ಮರಿಸಿ ಮಾತನಾಡಿದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್,ನನ್ನ ತಂದೆಯವರು ಕಡು ಬಡತನದಲ್ಲಿ ಹುಟ್ಟಿ,ಸಾಮಾನ್ಯ ರೈತರಾಗಿ,ಓದಿದ್ದು ಕೇವಲ ನಾಲ್ಕು ಐದನೇ ತರಗತಿ ಮಾತ್ರ ಕಲಿತಿದ್ರೂ ಸಹ ದುಡಿಮೆಯ ಬೆನ್ನತ್ತಿ ರಾಜಕೀಯಕ್ಕೆ ಬಂದಾಗ ಶಾಸಕರಂದತಹ ಸಂದರ್ಭದಲ್ಲಿ ಅವರು ಬಾರ್ ಆಂಡ್ ರೆಸ್ಟೋರೆಂಟ್ ಗಳನ್ನು ಕಟ್ಟದೇ ಅತೀ ಹಿಂದುಳಿದಂತಹ ತಾಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೇ ಹೆಚ್ಚಾಗಿ ವಾಸಿಸುತ್ತಿರುವ ಈ ಕ್ಷೇತ್ರದಲ್ಲಿ ಎಲ್ಲಾ ಜಾತಿ ಜನಾಂಗದವರು ಉನ್ನತ ಶಿಕ್ಷಣ ಪಡೆಯಬೇಕು ಎಂಬ ಉದ್ದೇಶದಿಂದ ತಾಲೂಕಿನ ಮೂಲೆಕಟ್ಟಿನ ಊರುಗಳಲ್ಲಿ ಶಾಲೆಗಳನ್ನು ಕಟ್ಟಿಸಿ, ಗ್ರಾಮೀಣ ಭಾಗದಲ್ಲಿನ ಬಡ ಮಕ್ಕಳಿಗೆ ಶಿಕ್ಷಣ ಕಲಿಯಲು ಅವಕಾಶ ಕಲ್ಪಿಸಿ ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದವರಾಗಿದ್ದರು. ತಂದೆಯವರ ಅಧಿಕಾರದ ಅವಧಿಯಲ್ಲಿ ನಮ್ಮ ತಾಲೂಕಿಗೆ ಅತಿ ಅವಶ್ಯವಾಗಿ ಬೇಕಾದ ಸರ್ಕಾರಿ ಆಸ್ಪತ್ರೆ,ಡಿಗ್ರಿ ಕಾಲೇಜು, ಪಿಯು ಕಾಲೇಜು, ಸೇರಿದಂತೆ ಮುಂತಾದ ಅನೇಕ ಅಭಿವೃದ್ಧಿ ಕಾರ್ಯಯೋಜನೆಗಳನ್ನು, ಇಲಾಖೆಗಳನ್ನು, ತಾಲೂಕಿಗೆ ತಂದು ಧಾರೆ ಎರೆದಿದ್ದಾರೆ ಎಂದು ಇದೇ ವೇಳೆಯಲ್ಲಿ ಶಾಸಕರು ಸ್ಮರಿಸಿದರು.

ವರದಿ ಹೆಚ್ಚು ವೀರಣ್ಣ

# ಸ್ಕ್ಯಾನ್ ಮಾಡಿ ನರೇಗಾ ಕಾಮಗಾರಿ ಬೇಡಿಕೆ ಸಲ್ಲಿಸಿ–ವೈಜನಾಥ ಸಾರಂಗಮಠ ಉದ್ಯೋಗ ಖಾತ್ರಿ ನಡಿಗೆ ಸಬಲತೆಯಡೆಗೆ ಅಭಿಯಾನಕ್ಕೆ ಚಾಲನೆ

● ವಾರ್ತಾಲೋಕ ವಾರ್ತೆ

**ಕುಕನೂರ್ :ಅ14.** ಕುಕನೂರ ತಾಲೂಕಿನ ಮಸಬಹಂಚಿನಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, 2025–26 ನೇ ಸಾಲಿನ ಕ್ರಿಯಾ ಯೋಜನೆ ತಯಾರಿಕೆ ಪ್ರಕ್ರಿಯೆ ಪ್ರಾರಂಭಿಸಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ವೈಜನಾಥ ಸಾರಂಗಮಠ ಮಾತನಾಡಿ, ಪ್ರತೀ ವರ್ಷದಂತೆ ಇದೇ ಅಕ್ಟೋಬರ್–2 ರಿಂದ ಕ್ರಿಯಾ ಯೋಜನೆ ತಯಾರಿಕೆ ಪ್ರಕ್ರಿಯೇ ಪ್ರಾರಂಭವಾಗಿದ್ದು, ಅದರಂತೆ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮತ್ತು ಗ್ರಾಮಸ್ಥರು ನರೇಗಾ ಕಾಮಗಾರಿ ಬೇಡಿಕೆಯನ್ನು *ಕ್ಯೂ ಆರ್ ಕೋಡ್ ಸ್ಕಾನ್* ಮಾಡಿ ಸಲ್ಲಿಸಬಹುದು ಇದರಿಂದ ಯೋಜನೆಯ ಸದುಪಯೋಗವನ್ನು ಅವಶ್ಯವಿರುವ ಫಲಾನುಭವಿಗಳು ಪಡೆದುಕೊಳ್ಳಬಹುದು.

ಒಬ್ಬ ಫಲಾನುಭವಿ 3 ಕಾಮಗಾರಿಗಳ ವರೆಗೆ ಅರ್ಜಿ ಸಲ್ಲಿಸಬಹುದು.

ಈ ಕಾಮಗಾರಿಯನ್ನು ಫಲಾನುಭವಿಗಳು ತಮ್ಮ ಮೊಬೈಲ್ ನಲ್ಲಿಯೇ ಅರ್ಜಿ ಸಲ್ಲಿಸಬಹುದು. ಇದರಿಂದ ಫಲಾನುಭವಿ ನೇರವಾಗಿ ಅರ್ಜಿ ಸಲ್ಲಿಸುವುದರಿಂದ ಮಧ್ಯವರ್ತಿ ಗಳ ಇಲ್ಲದೇ ಕಾಮಗಾರಿ ಕ್ರಿಯಾ ಯೋಜನೆ ಯಾಗುತ್ತದೆ ಈ ಎಲ್ಲಾ ಕಾಮಗಾರಿಗಳನ್ನು ಸಂಗ್ರಹಿಸಿ ಆಧ್ಯತಾ ಪಟ್ಟಿ ತಯಾರಿಸಿ ಗ್ರಾಮ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುತ್ತದೆ.



ಇದರಿಂದಾಗಿ ನೈಜ ಫಲಾನುಭವಿಗಳಿಗೆ ಅವಕಾಶ ಸಿಗುವಂತಾಗಿದೆ ಎಂದರು.

ನಂತರ ತಾಲೂಕ ಐ.ಇ.ಸಿ ಸಂಯೋಜಕ ಲಕ್ಷ್ಮಣ ಕೆರಳ್ಳಿ ಮಾತನಾಡಿ ಅಕ್ಟೋಬರ್ ತಿಂಗಳಾಂತ್ಯದ ವರೆಗೆ ವಿಶೇಷ ಐ.ಇ.ಸಿ ಅಭಿಯಾನದಡಿಯಲ್ಲಿ ಮನೆ ಮನೆ ಭೇಟಿ ಮಾಡಿ ಕಾಮಗಾರಿ ಬೇಡಿಕೆ ಪೆಟ್ಟಿಗೆಯಲ್ಲಿ ಕಾಮಗಾರಿಗಳನ್ನು ಸಂಗ್ರಹಿಸಲಾಗುವುದು, ನರೇಗಾ ಫಲಾನುಭವಿಗಳು ಕಾಮಗಾರಿಗಳನ್ನು ಪೆಟ್ಟಿಗೆಯಲ್ಲಿ ಹಾಕಬಹುದು, ಸದರಿ ಕಾಮಗಾರಿಗಳನ್ನು ತಾಂತ್ರಿಕ ಸಂಯೋಜಕರು ಪೂರ್ವಭಾವಿಯಾಗಿ ವೀಕ್ಷಣೆ ಮಾಡಿ ಅಂದಾಜು ಪತ್ರಿಕೆ ತಯಾರಿಸುತ್ತಾರೆ. ಅದೇ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಇಡುವುದರಿಂದ ಎಲ್ಲಾ ಕಾಮಗಾರಿಗಳು ಕಡ್ಡಾಯವಾಗಿ ಅನುಷ್ಠಾನ ಮಾಡಬಹುದು ಎಂದರು.

ಎಲ್ಲಾ ಸಮಾಜದ ಮಹಿಳೆಯರು ಹಾಗೂ ಪುರುಷರು ಯುವಕ ಮಿತ್ರರು ಒಬ್ಬ ಫಲಾನುಭವಿ 3 ಕಾಮಗಾರಿಗಳ ವರೆಗೆ ಅರ್ಜಿ ಸಲ್ಲಿಸಬಹುದು.ಈ

ಸ್ಥಳದಲ್ಲಿ ಗ್ರಾಮ ಗ್ರಾಮ ಪಂಚಾಯತಿ ಸದಸ್ಯರಾದ ಆನಂದಪ್ಪ ಮಾದನೂರ, ಕ್ಲಸ್ಟರ್ ಸುಪರ್ ವೂಜರ್ ಪೂಜಾ ನಾಯಕ್, ಶ್ರೀ ಗವಿಸಿದ್ದೇಶ್ವರ ಉಕಐಈ ಪದಾಧಿಕಾರಿಗಳು, ಒಃಪ, ಐಅಖಕ, ಕೃಷಿ ಸಖಿ, ಪಶು ಸಖಿ, ಬಿಸಿ ಸಖಿ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಗ್ರಾಮಸ್ಥರು ಸ್ವ ಸಹಾಯ ಸಂಘದ ಮಹಿಳೆಯರು ಅರ್ಜಿ ಹಾಕರಿದ್ದರು. ಈ ಸಮಾರಂಭದಲ್ಲಿ ಮಹಿಳೆಯರು ಮತ್ತು ಗ್ರಾಮದ ಮುಖಂಡರು ಎಲ್ಲಾ ಸದಸ್ಯರು ಉಪಸ್ಥಿತರಿದ್ದರು

ವರದಿ ಮಂಗಳೇಶ ಎಸ್ ಮಂಗಳೂರು

# ಮನೆ ಮನೆ ಬಾಗಿಲಿಗೆ ಖಾತಾ ನಕಲು ವಿತರಣೆ

● ವಾರ್ತಾಲೋಕ ವಾರ್ತೆ

ಕೊಟ್ಟೂರು : ಅ14.ಸರ್ಕಾರದ ಆದೇಶದಂತೆ ಜಿಲ್ಲಾಧಿಕಾರಿಗಳ ನಿರ್ದೇಶನ ಮೇರೆಗೆ ಪಪಂ ಮುಖ್ಯ ಅಧಿಕಾರಿ ನಾಸಾರುಲ್ಲ ಮತ್ತು ಪಪಂ ಅಧ್ಯಕ್ಷೆ ಬದ್ದಿ ರೇಖಾರಮೇಶ್ ರವರ ನೇತೃತ್ವದಲ್ಲಿ ಸೋಮವಾರ ಮನೆ ಮನೆ ಬಾಗಿಲಿಗೆ ತೆರಳಿ ಖಾತಾ ನಕಲನ್ನು ನೀಡುವುದರ ಮೂಲಕ ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾದರು.

ಪಟ್ಟಣದಲ್ಲಿ ಸುಮಾರು 08ವಾರ್ಡ್ ಗಳಿಗೆ ಭೇಟಿ ನೀಡಿ ಖಾತಾ ನಕಲನ್ನು ವಿತರಿಸುವ ಸಂದರ್ಭದಲ್ಲಿ ಅಲ್ಲಿನ ಸಾರ್ವಜನಿಕರ ಮೂಲಭೂತ ಸಮಸ್ಯೆಯನ್ನು ಆಲಿಸಿದರು ನಂತರ ಅವುಗಳಿಗೆ ಮುಂದಿನ ದಿನಗಳಲ್ಲಿ ಸೂಕ್ತ ಪರಿಹಾರ



ಒದಗಿಸುವ ಭರವಸೆಯನ್ನು ವ್ಯಕ್ತಪಡಿಸಿದರು ಇದಕ್ಕೆ ಪ್ರತಿಕ್ರಿಸಿದ ಸಾರ್ವಜನಿಕರು ಖಾತಾ ನಕಲು ಪಡೆಯಲು ಹಲವಾರು ಗೊಂದಲಗಳು ನಿರ್ಮಾ ಣವಾಗುತ್ತಿದ್ದವು ಇವುಗಳನ್ನು ತಪ್ಪಿಸಲು ಸರ್ಕಾರ ಮತ್ತು ಜಿಲ್ಲಾಧಿಕಾರಿಯವರು ಉತ್ತಮ ಯೋಜನೆಯನ್ನು ಮಾಡಲಾಗಿದೆ

ಈ ಯೋಜನೆಯನ್ನು ಸ್ಥಳೀಯ ಅಧ್ಯಕ್ಷರು ಹಾಗೂ ಮುಖ್ಯ ಅಧಿಕಾರಿಯವರು ಸಮರ್ಪ ಕವಾಗಿ ನಿರ್ವಹಿಸುತ್ತಿದ್ದಾರೆ ಇದರಿಂದಾಗಿ ಇಲ್ಲಿನ ಫಲಾನುಭವಿಗಳಿಗೆ ತುಂಬಾನೇ ಅನುಕೂಲವಾಗುತ್ತದೆ ಎಂದು ಪತ್ರಿಕೆಯೊಂದಿಗೆ ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷರು, ಹಾಗೂ ಸರ್ವ ಸದಸ್ಯರು, ಮುಖಂಡ ಬದ್ದಿ ಮರಿಸ್ವಾಮಿ, ಮತ್ತು ಪಟ್ಟಣ ಪಂಚಾಯಿತಿ ಸಿಬ್ಬಂದಿ ವರ್ಗದವರು ಇದ್ದರು

ಕೋಟ್ ಪಟ್ಟಣದ ಒಟ್ಟು 20 ವಾರ್ಡ್ಗಳ ಪೈಕಿ 16410 ಖಾತಾ ನಕಲು ನೀಡಲು ಕೋರಿ ಅರ್ಜಿಗಳು ಬಂದಿರುತ್ತವೆ ಇದರಲ್ಲಿ 10410 ಖಾತಾ ನಕಲು ನೀಡಲಾಗಿದೆ ಉಳಿದ 6000 ಫಾರಂ 3 ದಾಖಲೆಯನ್ನು ಪರಿಶೀಲಿಸಿ ಕ್ರಮೇಣವಾಗಿ ವಿತರಿಸಲಾಗುವುದು

ಎ.ನಾಸಾರುಲ್ಲ

ಪಪಂ ಮುಖ್ಯಧಿಕಾರಿ.

# ರಕ್ತದಾನದಿಂದ ಮನುಕುಲ ಉಳಿಯಲಿಕ್ಕೆ ಸಾಧ್ಯ: ರವಿಕುಮಾರ ಚವ್ಹಾಣ

**ಇಂಡಿ :** ರಕ್ತದಾನದಿಂದ ಮನುಕುಲ ಉಳಿಯಲಿಕ್ಕೆ ಸಾಧ್ಯ. ಆರೋಗ್ಯವಂತ ಯುವಕರು ರಕ್ತದಾನ ಮಾಡಲು ಮುಂದೆ ಬರಬೇಕು ಎಂದು ಜಗದಂಬಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ರವಿಕುಮಾರ ಚವ್ಹಾಣ ಹೇಳಿದರು.

ತಾಲ್ಲೂಕಿನ ತಾಂಬಾ ಗ್ರಾಮದಲ್ಲಿ ಅಂಬಾ ಭವಾನಿ ಎಜುಕೇಶನ್ ಟ್ರಸ್ಟ್ ಹಾಗೂ ಜಗದಂಬಾ ವಿದ್ಯಾವರ್ಧಕ ?? ಮಂಗಳವಾರ ಹಮ್ಮಿಕೊಂಡ ನಾಡದೇವಿ ನವರಾತ್ರಿ ಉತ್ಸ ವ ಕಾರ್ಯಕ್ರಮದಲ್ಲಿ ಜಿಲ್ಲಾ ಆಸ್ಪತ್ರೆ, ತಾಲೂಕು ಆಸ್ಪತ್ರೆ ಮತ್ತು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ ಏರ್ಪಡಿಸಿದ ಉಚಿತ ರಕ್ತದಾನ ಶಿಬಿರ, ಆರೋಗ್ಯ ಶಿಬಿರ ಮತ್ತು ಕಣ್ಣಿನ ತಪಾಸಣೆ ಶಿಬಿರದಲ್ಲಿ ಅವರುಮಾತನಾಡಿದರು.

ರಕ್ತವನ್ನು ಕೃತಕವಾಗಿ ಉತ್ಪಾದನೆ ಮಾಡಲು



ಸಾಧ್ಯವಿಲ್ಲ. ದಾನಿಯ ದೇಹದಿಂದ ಮಾತ್ರ ರಕ್ತ ಪಡೆಯಲು ಸಾಧ್ಯ. ಆದ್ದರಿಂದ ರಕ್ತದಾನ ಮತ್ತೊಬ್ಬರಿಗೆ

ಮಾದರಿಯಾಗಬೇಕು ಎಂದರು. ನಾಗಠಾಣ ಮಾಜಿ ಶಾಸಕ ದೇವಾನಂದ ಎಫ್ ಚವ್ಹಾಣ ಮಾತನಾಡಿ, ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ 62ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು.

ತಾಲೂಕು ಆರೋಗ್ಯ ಅಧಿಕಾರಿ ಅರ್ಚನಾ ಕುಲಕರ್ಣಿ, ತಡವಲಗ ಏನ್. ಸಿಡಿ ಘಟಕದ ಆಡಳಿತ ವೈದ್ಯಾಧಿಕಾರಿ ಕೃಷ್ಣಕುಮಾರ ಜಾಧವ, ಪ್ರಶಾಂತ ಧೂಮಗೊಂಡ, ಹಿರಿಯ ಮತ್ತು ಕಿರಿಯ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

VARTHALOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com